# ನೇಸರು
## ತಿಂಗಳೋಲೆ
## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XV 2 ಫೆಬ್ರವರಿ 1997

ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್ನಿನಲ್ಲಿ ಸಂಗೀತ ಕಾರ್ಯಕ್ರಮಗಳು | ● ರಮಾ ಕೃಷ್ಣ | 2 |
| ರಾಯಘಡದ ಪ್ರವಾಸ | ● ರಮಾ ಕೃಷ್ಣ | 3 |
| ಇದು ನಮ್ಮ ಪ್ರಾಚೀನ ಭಾರತ - 3 | ● ಎಸ್. ಆನಂದ್ ಶಾಸ್ತ್ರಿ | 6 |
| ನಾನು ಮತ್ತು ಮೈಸೂರು ಅಸೋಸಿಯೇಶನ್ | ● ಸಿ. ಕೆ. ಶಂಕರ್‌ನಾರಾಯಣರಾವ್ | 8 |
| ಕವನ : | | |
| ಬಾಗಿಲನಾಚೆ | ● ಅಜ್ಞಾತ | 11 |
| ಸಂಮೋಹಿನಿ ಚಿಕಿತ್ಸೆ - 13 | ● ಡಾ। ಉಷಾರಾವ್ | 12 |
| ಸುತ್ತ-ಮುತ್ತ | | 14 |


The Mysore Association, Mumbai
393. Bhaudaji Road. Matunga. Mumbai-400 019.
Tel.: 402 46 47 ● Grams: "KARUNADU"

## ‘ನೇಸರು’ ಬಗ್ಗೆ ಬಂದ ಪತ್ರಗಳು

ಸಂಪಾದಕರು
ನೇಸರು ಮೈಸೂರ್ ಅಸೋಸಿಯೇಶನ್
ಮುಂಬಯಿ

ಮಾನ್ಯರೇ,

ಈ ಸಾರಿ ನೇಸರು ಪತ್ರಿಕೆಯಲ್ಲಿ ನಾನು ಬರೆದ ಪದ್ಯವನ್ನು (ಕೊನೆಯ ಹಂಬಲ) ನೀವು ಅಚ್ಚು ಮಾಡಿರುವುದು ನೋಡಿ ತುಂಬಾ ಸಂತೋಷವಾಯಿತು. ನಾನು ಬರೆದದ್ದೂ ಮೊದಲನೇ ಸಾರಿ, ಅಚ್ಚಾದ್ದೂ ಮೊದಲನೇ ಸಾರಿ. ನಿಮಗೆ ತುಂಬ ವಂದನೆಗಳು.

ಈ ಪತ್ರದ ಜೊತೆ ಇನ್ನೊಂದು ಪದ್ಯ ಕಳಿಸಿದ್ದೇನೆ. ನೀವು ಅದನ್ನು ಪರಾಮರ್ಶಿಸಬೇಕು. ಇದರಲ್ಲಿ ಏನಾದರೂ ಹುರುಳಿದ್ದರೆ ನಿಮ್ಮ ಪತ್ರಿಕೆಯಲ್ಲಿ ಸೇರಿಸುವುದು.

ಅನಂತ ವಂದನೆಗಳು
**ಅಜ್ಞಾತ**

ಸಂಪಾದಕರು,
ನೇಸರು

ಮಾನ್ಯರೇ,

ನೇಸರುವಿನಲ್ಲಿ ಶ್ರೀಯುತ ಆನಂದ ಶಾಸ್ತ್ರಿಗಳು ಬರೆಯುತ್ತಿದ್ದ, ಇದು `ನಮ್ಮ ಪ್ರಾಚೀನ ಭಾರತ' ಎಂಬ ಶಿರೋನಾಮೆಯ ಲೇಖನ ಮಾಲೆ ಬಹಳ ಚೆನ್ನಾಗಿದೆ. ಇಂತಹ ಲೇಖನಗಳು ನೇಸರುವಿನಲ್ಲಿ ಹೆಚ್ಚು ಹೆಚ್ಚಾಗಿ ಬರಲಿ. ನಮ್ಮ ಇಂದಿನ ಪೀಳಿಗೆ ನಮ್ಮ ಭಾರತದ ಪ್ರಾಚೀನ ವೈಭವವನ್ನೂ, ನಮ್ಮ ಸಂಸ್ಕೃತಿಯನ್ನೂ ಅರಿಯುವಂತಾಗಲಿ ಎಂದು ಬಯಸುತ್ತೇನೆ.

ವಂದನೆಗಳು.
**ರಮಾ ಕೃಷ್ಣ**

**"THINK TANK"**

As a general rule, the most successful man in life is the man who has the best information.
Benjamin Disraeli

***

If my mind can conceive it, and my heart can believe it, I know I can achieve it.
Jesee Jackson

***

Beware of little expenses. A small leak will sink a great ship.
Benjamin Franklin.

# ಅಸೋಸಿಯೇಶನ್ನಿನಲ್ಲಿ ಸಂಗೀತ ಕಾರ್ಯಕ್ರಮ



**ಕುಮಾರಿ ಮೌನ ರಾಮಚಂದ್ರ ರವರ ಹಿಂದೂಸ್ತಾನಿ ಶೈಲಿ ಗಾಯನ.**

ತಾ. 31-1-1997ರ ಸಂಜೆ ಮೈಸೂರು ಅಸೋಸಿಯೇಶನ್ನಿನಲ್ಲಿ ಕು. ಮೌನ ರಾಮಚಂದ್ರರವರ ಹಿಂದೂಸ್ತಾನೀ ಶೈಲಿಯ ಹಾಡುಗಾರಿಕೆ ಏರ್ಪಡಿಸಲಾಗಿತ್ತು. ಸದಸ್ಯರಿಗೆ ಕು. ಮೌನರವರ ಸಂಗೀತ ಕೇಳುವ ಅವಕಾಶ ಸಿಕ್ಕಿತ್ತು.

ಕು. ಮೌನ ರಾಮಚಂದ್ರರವರು B.E. ಪದವೀಧರೆಯಾಗಿರುವರು. ಇವರು ತಮ್ಮ ಸಂಗೀತ ಶಿಕ್ಷಣವನ್ನು `ಅರ್ಜುನ್‌ಸಾ ನಾಕೋಡ್' ಅವರಿಂದ ಪಡೆದಿದ್ದಾರೆ. ಕರ್ನಾಟಕ ಸರ್ಕಾರ ನಡೆಸುವ ಹಿಂದೂಸ್ತಾನಿ ಶೈಲಿಯ ಸಂಗೀತ ಪರೀಕ್ಷೆಯಲ್ಲಿ ಪ್ರಪ್ರಥಮ ಶ್ರೇಣಿಯ (ವಿದ್ವತ್ ಪರೀಕ್ಷೆಯಲ್ಲಿ) ಉತ್ತೀರ್ಣರಾಗಿದ್ದಾರೆ. 1993 ಇವರು ಕಿರಿಯ ಕಲಾವಿದರಿಗೆ ದೊರೆಯುವ `ರಂಗಸುರಭಿ' ಉಪಾಧಿ (Award)ಯಿಂದ ಸನ್ಮಾನಿತರಾಗಿದ್ದಾರೆ.

ಅವರು `South Central Culture Zone)ನ ಪರಿಯಿಂದ ಸಂಗೀತ ನೃತ್ಯ ಮಹೋತ್ಸವದಲ್ಲಿ ಹಾಡಿದ್ದಾರೆ. `ಪಂಚಾಕ್ಷರಿ ಗವಾಯಿ' ಮಹೋತ್ಸವದಲ್ಲಿ ಹುಬ್ಬಳ್ಳಿಯಲ್ಲಿ ಹಾಡಿದ್ದಾರೆ. ಮೈಸೂರಿನ `ದಸರೋತ್ಸವ' ಇತ್ಯಾದಿ ಪ್ರತಿಷ್ಠಿತ ಕಡೆಗಳಲ್ಲಿ ಹಾಡಿರುವುದೇ ಅಲ್ಲದೆ ಇವರು `ಸುರಸಾಗರ್' (ಬೆಂಗಳೂರಿನಿಂದ ದೊರೆಯುತ್ತದೆ) ವಿದ್ಯಾರ್ಥಿವೇತನವನ್ನು ಪಡೆದವರಾಗಿದ್ದಾರೆ.

ಇವರು `ಪೂರ್ವಿ ಕಲ್ಯಾಣ್'ನಲ್ಲಿ `ಮೋರೆ ಸಂಯ್ಯಾ ಆಜಾ' ಮತ್ತು ರಾಗ್ `ಜೋಗ್'ನಲ್ಲಿ `ಸಾಜನ್ ಮೋರೇ ಘ-ರ್ ಆಜಾ' ಎಂಬ ಎರಡು ಖಿಯಾಲ್‌ಗಳನ್ನು ಸುಂದರವಾಗಿ ಹಾಡಿದರು. ಮರಾಠಿಯ `ಸುರ ಸುಖ ಕರ ತೂನೀ ವ್ಹಾಬ' ಎಂಬ ರಂಗಗೀತೆ (ನಾಟ್ಯ ಸಂಗೀತ)ವನ್ನು ಬಸವಣ್ಣನವರ ವಚನವನ್ನೂ ಹಾಡಿದರು. ಹಾಡುಗಾರಿಕೆ ಸುಶ್ರಾವ್ಯವಾಗಿತ್ತು.

ಇವರಿಗೆ ಪಕ್ಕವಾದ್ಯದಲ್ಲಿ (ಸಂಗತ್) ಹಿಂದೂಸ್ತಾನದ ಅಗ್ರಗಣ್ಯ ಹಾರ್ಮೋನಿಯಂ ವಾದಕರಾಗಿರುವ `ಶ್ರೀಯುತ ಪಂ. ಶಾಂತಾರಾಮ್ ಜಾಧವ್' ಹಾರಮೋನಿಯಂ ನುಡಿಸಿದರು. ಇವರು ಹಿರಿಯ ಕಲಾವಿದರಾಗಿದ್ದು ಹಿಂದೂಸ್ತಾನದ ಹೆಸರಾಂತ ಕಲಾವಿದರಿಗೆ ಸಂಗತ್ ನೀಡಿರುವ ಕೀರ್ತಿ ಇವರದಾಗಿದೆ. ಸ್ವದೇಶದಲ್ಲೇ ಅಲ್ಲದೆ ಇವರು ವಿದೇಶಗಳಲ್ಲೂ ತಮ್ಮ ಕಾರ್ಯಕ್ರಮ ನಡೆಸಿದ್ದಾರೆ. `ಅಂತರ್ರಾಷ್ಟ್ರೀಯ ಸಂಗೀತೋತ್ಸವದಲ್ಲಿ ಭಾಗವಹಿಸಿರುವ ಇವರು ಪ್ರಖ್ಯಾತ ನೃತ್ಯ ಕಲಾವಿದರಿಗೂ ಮತ್ತು ಹೆಸರಾಂತ ತಬಲ ವಾದಕರಿಗೂ ಸಂಗತ್ ನೀಡಿರುವ ಕೀರ್ತಿ ಇವರದಾಗಿದೆ.

ಶ್ರೀ `ರಾಜೇಂದ್ರ ನಾಕೋಡ್'ರವರು ಕು. ಮೌನಾರವರಿಗೆ ತಬಲಾವಾದಕರಾಗಿದ್ದರು. ಇವರು ಹುಬ್ಬಳ್ಳಿಯ `ಅರ್ಜುನ್ ನಾಕೋಡ್'ರವರ ಪುತ್ರರು. ಇವರು `ರಘುನಾಥ್ ನಾಕೋಡ್'ರವರ ಶಿಷ್ಯರು. ಇವರು ಆಕಾಶವಾಣಿಯ `A'ಗ್ರೇಡ್ ಕಲಾವಿದರಾಗಿರುವುದೇ ಅಲ್ಲದೆ ದೂರದರ್ಶನದ ಕಲಾವಿದರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಹಿಂದೂಸ್ತಾನದ ಹೆಸರಾಂತ ಕಲಾವಿದರಾದ `ಬೇಗಂ ಪರ್ವೀನ್ ಸುಲ್ತಾನ್' `ಪಂ. ಬಸವರಾಜ ರಾಜಗುರು' `ಪಂ. ವಿಶ್ವಮೋಹನ ಭಟ್' `ಪಂ. ಭೀಮಸೇನ್ ಜೋಶಿ'ಯಂತಹ ದಿಗ್ಗಜರುಗಳಿಗೆ ಸಂಗತ್ ನೀಡಿರುವ ಕೀರ್ತಿ ಇವರದಾಗಿದೆ.


ಇಂತಹ ಪ್ರಖ್ಯಾತ ಕಲಾವಿದರುಗಳ ಪಾವನ ಗಾಯನಗಳನ್ನು ಕೇಳುವ ಸುಯೋಗ ನಮ್ಮದಾಗಿತ್ತು.

— ರಮಾ ಕೃಷ್ಣ.

# ರಾಯಘಢದ ಪ್ರವಾಸ

- ರಮಾ ಕೃಷ್ಣ.

ಪ್ರತಿ ವರ್ಷವೂ ನಮ್ಮ ಮೈಸೂರು ಅಸೋಸಿಯೇಷನ್ನಿನ ಸದಸ್ಯರು ಒಂದಿಲ್ಲೊಂದು ಸ್ಥಳಕ್ಕೆ ಪ್ರವಾಸ ಹೋಗುವುದು ಸರಿಯಷ್ಟೇ. ಈ ವರ್ಷ ಆರಿಸಿದ ಸ್ಥಳ ಮಹಾರಾಷ್ಟ್ರದ ಐತಿಹಾಸಿಕ ಪುರುಷ ಶಿವ ಛತ್ರಪತಿಯ ರಾಜಧಾನಿಯಾಗಿದ್ದ ರಾಯಘಢವನ್ನು, ಅಲ್ಲಿಯ M.T.D.C. ಪ್ರವಾಸಿ ಮಂದಿರವನ್ನು Book ಮಾಡಿಸಿ ನಾವುಗಳೆಲ್ಲಾ ತಾ. 11-01-1997ರಂದು ಅಸೋಸಿಯೇಷನ್ನಿನಿಂದ ಗೊತ್ತುಪಡಿಸಿದ ಬಸ್ಸಿನಲ್ಲಿ ಹೊರಟೆವು. ಎಲ್ಲರೂ ಸೇರಿ ಹೊರಡುವ ವೇಳೆಗೆ 10 ಗಂಟೆಯಾಯ್ತು. ವಾಶಿಯ ಬಳಿ ಬಸ್ಸಿನಲ್ಲಿ ಕೊಂಚ ತೊಂದರೆಯಾಗಿ 1 ಗಂಟೆ ತಡವಾಯ್ತು. ಬಸ್ಸಿನಲ್ಲಿದ್ದವರೆಲ್ಲಾ ಸ್ನೇಹಿತರುಗಳೇ ಆದ್ದರಿಂದ ಅಂತ್ಯಾಕ್ಷರಿಯ ಸ್ಪರ್ಧೆ ಪ್ರಾರಂಭವಾಯ್ತು. ಸ್ಪರ್ಧೆಗೆ ಶಾಸ್ತ್ರೀಯ, ಅಶಾಸ್ತ್ರೀಯ, ಲಘು ಸಂಗೀತ, ಚಿತ್ರ ಗೀತೆ ಎಲ್ಲವೂ ಸೇರಿತ್ತು. ಭಾಷಾ ನಿರ್ಬಂಧವಿಲ್ಲದೆ ಇದ್ದದ್ದರಿಂದ ಹಿಂದಿ, ಕನ್ನಡ, ಮರಾಠಿ, ಇಂಗ್ಲೀಷ್ ಎಲ್ಲಾ ತೆರನಾದ ಹಾಡುಗಳ, ಪದ್ಯಗಳ ಸುರಿಮಳೆಯೇ ಆಯ್ತು. ಎರಡೂ ಪಂಗಡ ಸಾಕಷ್ಟು ಬಲವಾಗಿದ್ದುದರಿಂದ ಸ್ಪರ್ಧೆ ಸಾಕಷ್ಟು ವೇಳೆಯನ್ನು ತೆಗೆದು ಕೊಂಡಿತು. ಭಾಗವಹಿಸದೇ ಇದ್ದವರು ಕೇಳಿ ಸಂತಸ ಪಟ್ಟರೆ, ಭಾಗವಹಿಸಿದ್ದವರ ಉತ್ಸಾಹ ನೋಡುವಂತಿತ್ತು. 3 ಗಂಟೆ ವೇಳೆಗೆ ನಮ್ಮ ಬಸ್ಸು ರಾಯಗಡದ ಬುಡದಲ್ಲಿ `ರೋಪ್ ವೇ' ಇದ್ದ ಜಾಗ ತಲಪಿತ್ತು. ಮೆಟ್ಟಿಲುಗಳ ಮೂಲಕ ಹತ್ತಿ ಮೇಲೆ ತಲುಪಲು ಪೂರಾ ಹಿಂಭಾಗಕ್ಕೆ 1 ಕಿಲೋಮೀಟರ್ ಬಂದು ಹತ್ತಬೇಕಿತ್ತು. ಹೋಗುವಾಗ ಎಲ್ಲರೂ ರೋಪ್ ವೇ ಮುಖಾಂತರವೇ ನಮ್ಮ ನಮ್ಮ ಸಾಮಾನು ಮತ್ತು ಊಟ, ತಿಂಡಿಯ ಸಾಮಾನು ಕೊಂಚ ಕೊಂಚ ತೆಗೆದು ಕೊಂಡು ಮೇಲೆ ತಂಡ, ತಂಡವಾಗಿ ತಲಪಿದೆವು. ಬೆಟ್ಟದ ನೆತ್ತಿಯ ಮೇಲೆ ತಲಪುತ್ತಿದ್ದಂತೆಯೇ ವಿಶಾಲವಾದ ದಿಣ್ಣೆ, ತಗ್ಗುಗಳಿಂದ ಕೂಡಿದ ಭೂಭಾಗ ಕಂಡಿತು ಹಾಗೂ ಒಂದು ಕಡೆಯ ಕೋಟೆ ಮೇಲೆ ಹೋದ ಮೇಲೆ ಕಾಣಿಸಿತು. ಕೆಳಗಿನಿಂದ ನೋಡಿದರೆ ಕೋಟೆ ಮೇಲೆ ಇದೆಯೆಂದು ತಿಳಿಯುವುದೇ ಇಲ್ಲ. ಇದೇ ಇದರ ವೈಶಿಷ್ಟ್ಯ. ರಾಯಘಢ ನಾನಾ ಬೆಟ್ಟಗಳಿಂದ ಆವೃತವಾಗಿದ್ದು ತಳಭಾಗದಲ್ಲಿ ಸಮತಲ ಭೂಪ್ರದೇಶ ಇಲ್ಲವೆಂದೇ ಹೇಳಬೇಕು ಹಾಗಿದೆ.



ರಾಯಘಢ ಕೋಟೆಯ ಒಳ ಆವರಣ.

ನಮ್ಮ ತಂಡ 45 ಜನವನ್ನೊಳಗೊಂಡಿದ್ದು ಎಲ್ಲರೂ ಮೇಲೆ ಸೇರುವ ವೇಳೆಗೆ 1 ಗಂಟೆಯಾಯ್ತು. 4 ಗಂಟೆಯ ವೇಳೆಗೆ ಎಲ್ಲರೂ M.T.D.C. ಪ್ರವಾಸಿ ಮಂದಿರ ಸೇರಿ ಕೈಕಾಲು ಮುಖ ತೊಳೆದು ಮುಂಬೈನಿಂದಲೇ ಕಟ್ಟಿ ಕೊಂಡು ಬಂದಿದ್ದ ಥೇಪ್ಲ, ಈರುಳ್ಳಿ ಗೊಜ್ಜು, ಮೊಸರನ್ನ ತಾಳ ಹಾಕುತ್ತಿದ್ದ ಹೊಟ್ಟೆಗೆ ಅಮೃತವಾಗಿತ್ತು. ಊಟವಾಗುತ್ತಿದ್ದಂತೆಯೇ ಒಂದು ಸುತ್ತು ಪ್ರೇಕ್ಷಣೀಯ ಸ್ಥಳ ನೋಡಲು ಹೊರಟೆವು. ಆಗಲೇ 5 ಗಂಟೆಯಾಗಿತ್ತು. ಕುರುಕಲು ತಿಂಡಿಗಳು ಕೈಲಿತ್ತು. ನಾವು ಮೊದಲು ಪ್ರವೇಶಿಸಿದ್ದು ಕೋಟೆಯ ಹಿಂಬಾಗದಿಂದ. ಈ ಕೋಟೆ 350 ವರ್ಷ ಹಿಂದಿನದು... ಅಲ್ಲಲ್ಲಿ ಶಿಥಿಲವಾಗಿದೆ. ಮೊದಲು ನಾವು ಪ್ರವೇಶಿಸಿದ್ದು ಶಿವ ಛತ್ರಪತಿಯ ರಾಣೀ ವಾಸ. ಇಲ್ಲಿ ಯಾವ ಕಟ್ಟಡಗಳೂ ಇಲ್ಲ. ಅದರ ಅವಶೇಷವಾಗಿ ಮಜಬೂತಾದ ತಳಹದಿ ಹಾಗೂ ಕೋಟೆಯ ಬುರುಜುಗಳು ಕಂಡು ಬರುತ್ತದೆ. ಶತ್ರು ಧಾಳಿ, ಪ್ರಕೃತಿ ಧಾಳಿಗಳನ್ನು ತಡೆದು ಕೊಂಡು ಇಂದಿಗೂ ಈ ಕೋಟೆಯ ಬಹುಭಾಗ ಒಳ್ಳೆಯ ಸ್ಥಿತಿಯಲ್ಲಿದೆ. ಇಂದಿನಷ್ಟು ಅನುಕೂಲಗಳಿಲ್ಲದ ಆ ಕಾಲದಲ್ಲಿ ಇಂತಹ ಕೋಟೆಯ ನಿರ್ಮಾಣ ಕಂಡು ಆಶ್ಚರ್ಯವಾಯ್ತು. ಅಲ್ಲಿಂದ ಮುಂದೆ ಶಿವ ಛತ್ರಪತಿಯ ಅರಮನೆಗೆ ಬಂದೆವು. ಇದೂ ಕೂಡ ಕಟ್ಟಡದ ಅವಶೇಷವಾಗಿ ಆಗಿದೆ ಅಲ್ಲಿಂದ ಎಡ ಭಾಗಕ್ಕೆ ಬಂದೀಖಾನೆ (ಜೈಲ್) ಕೈದಿಗಳನ್ನು ಇಡುತ್ತಿದ್ದ Cellಗಳನ್ನು ಕಂಡೆವು. ಕೈದಿಗಳು ಯಾರದೇ ಸಹಾಯವಿಲ್ಲದೆ ಇವುಗಳಿಂದ ಮೇಲಕ್ಕೆ ಹತ್ತಿ ಬರುವುದು ಸಾಧ್ಯವೇ ಇಲ್ಲ. ಇವು ಅತೀ ಕಿರಿದಾದ ಕೊಠಡಿಗಳಾಗಿವೆ. ಅಲ್ಲಿಂದ ಮುಂದೆ ಬಂದರೆ ಶಿವ ಛತ್ರಪತಿಯ ಆಸ್ಥಾನದ ಭಾಗ ರಾಜ ಸಭಾ ಸಿಕ್ಕುತ್ತದೆ. ಈ ಭಾಗದಲ್ಲಿ ಗೋಡೆಗಳು, ಬುರುಜುಗಳು ಒಳ್ಳೆಯ ಸ್ಥಿತಿಯಲ್ಲಿವೆ. ಸಿಂಹಾಸನವಿರುತ್ತಿದ್ದ ಜಾಗದಲ್ಲಿ 13 ಅಡಿ ಉದ್ದದ 10-½ ಅಡಿ ಅಗಲದ ಎತ್ತರವಾದ ಕಟ್ಟೆ ಇದೆ. ಈ ಕಟ್ಟೆಯ ನಾಲ್ಕೂ ದಿಕ್ಕಿನಲ್ಲಿ ಮೆಟ್ಟಿಲುಗಳಿವೆ. ಶಿವ ಛತ್ರಪತಿಯು ಇದರ ಮೇಲೆ 32 ಮಣ ಚಿನ್ನದ ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದ. ಇಂದು ಈ ಕಟ್ಟೆಯ ಮೇಲೆ ಇತ್ತೀಚೆಗೆ ನಿರ್ಮಿಸಿದ ಕಂಚಿನ ಸುಂದರವಾದ `ಮಂಟಪವಿದೆ. ಇದನ್ನು ನಿರ್ಮಿಸಿದ ಶಿಲ್ಪಿ `ಮು. ಸಂ. ಖಾನ್‌ವಿಲ್‌ಕರ್'. ಇವರು ಮುಂಬೈನವರು. ಈ ಸಭಾಗೃಹ ಸಿಂಹಾಸನದ ಹಿಂಭಾಗದ ಗೋಡೆಯಿಂದ ಹಿಡಿದು ನಗರ್ ಖಾನಾ ಮಹಾದ್ವಾರದ ವರೆಗೆ 220 ಅಡಿ ಉದ್ದ 124 ಅಡಿ ಅಗಲವಿದ್ದು ಸಭಾಗೃಹ ಭವ್ಯವಾಗಿದೆ. ಇದರ ನಾಲ್ಕು ಕಡೆಯ ಗೋಡೆಗಳು ಶಿಥಿಲವಾಗಿದ್ದರೂ ಕೂಡ ಭವ್ಯ ಸಭಾಂಗಣದ ದೃಶ್ಯ ಕಂಡು ಬರುತ್ತದೆ. ಈ ಸಭಾಗೃಹದಲ್ಲಿ

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**


**Agents For**
**INDIAN AIR LINES,**
**EAST WEST,**
**MODI LUFT &**
**JET AIRLINES**

**REGD. OFFICE:**
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
**ALSO AT:**
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಮೇಲುಚಾವಣಿ ಇಲ್ಲ (ಹಿಂದೂ ಇರಲಿಲ್ಲ). ಈ ಸಭಾಂಗಣ ಮತ್ತು ನಗರ್ ದರ್‌ವಾಜಾದ ವಾಸ್ತು ಶಿಲ್ಪದ ವೈಶಿಷ್ಟ್ಯವೆಂದರೆ ಸಿಂಹಾಸನದ ಬಳಿ ನಿಂತು ಎಷ್ಟೇ ಮೆಲು ದನಿಯಲ್ಲಿ ಮಾತನಾಡಿದರೂ ನಗರ್ ದರ್‌ವಾಜಾದ ಬಳಿ ಇದ್ದವರಿಗೆ ಕೇಳಿಸುತ್ತದೆ. ಇದರ ಉದ್ದೇಶ, ಸಿಂಹಾಸನಸ್ಥ ವ್ಯಕ್ತಿ ಗಟ್ಟಿಯಾಗಿ ಮಾತನಾಡದಿದ್ದರೂ ಇಷ್ಟು ದೊಡ್ಡ ಸಭಾಂಗಣದಲ್ಲಿಯ ಎಲ್ಲರಿಗೂ ಮಹಾರಾಜರ ಮಾತು ಕೇಳಬೇಕು ಇದರಿಂದ ಇದರ ವಾಸ್ತು ಶಿಲ್ಪ ಎಷ್ಟು ಉತ್ತಮ ಮಟ್ಟದ್ದೆಂದು ಊಹಿಸಬಹುದು. ಸಭಾ ಮಂಟಪದಲ್ಲಿ ಶಿವ ಛತ್ರಪತಿಯ ಮೂರ್ತಿ ಇಲ್ಲ. ವೀರ ಶಿವ ಛತ್ರಪತಿಯ ಮೂರ್ತಿಯನ್ನು ಆತನ ತುಂಬಿದ ಸಭಾಗೃಹವನ್ನು ನನ್ನ ಮನ ಕಲ್ಪಿಸುತ್ತಿತ್ತು. ಆದಿಲ್‌ಶಾಹೀ, ನಿಜಾಂಶಾಹೀ, ಮೊಗಲ್‌ಶಾಹೀ ಸುಲ್ತಾನರುಗಳಿಗೆ ಮಣ್ಣು ಮುಕ್ಕಿಸಿದ `ಬೆಟ್ಟದ ಇಲಿ' ಎಂದು ಹೆಸರು ಪಡೆದ ಶಿವ ಛತ್ರಪತಿಯು ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಮುಸಲ್ಮಾನರ ಪ್ರಬಲ ರಾಜ್ಯವಿದ್ದಾಗ ಛಲದಿಂದ ತನ್ನಲ್ಲಿದ್ದ ಅಲ್ಪ ಬಲದಿಂದ `ಶಿರುಕುಳ' ಯುದ್ಧ ನೈಪುಣ್ಯದಿಂದ ಸ್ವತಂತ್ರ ಹಿಂದೂ ರಾಜ್ಯ ಸ್ಥಾಪಿಸಿದ ಧೀರ. ಆಗ್ರಾ ಕೋಟೆಯಿಂದ ತಪ್ಪಿಸಿಕೊಂಡು ಬಂದು ತಾ. 6-6-1674ರಂದು ತನ್ನನ್ನು ಸ್ವತಂತ್ರ ರಾಜನೆಂದು ಘೋಷಿಸಿ ಕೊಂಡು ರಾಜ್ಯಾಭಿಷೇಕ ಮಾಡಿಸಿ ಕೊಂಡ ವೀರ ಶಿರೋಮಣಿ ಶಿವ ಛತ್ರಪತಿಗೆ ನನ್ನ ಮನ ಹೃತ್ಪೂರ್ವಕ ಪ್ರಣಾಮ ಮಾಡಿತು.


ಇಷ್ಟರಲ್ಲಿ 6 ಘಂಟೆಯಾಗುತ್ತಿದ್ದರಿಂದಲೂ ಎಲ್ಲರಿಗೂ ಬೆಟ್ಟದ ಮೇಲೆ ನಿಂತು ಸೂರ್ಯಾಸ್ತ ನೋಡುವ ಆತುರವಿದ್ದುದರಿಂದ ಎಲ್ಲರೂ `ನಗರ್ ದರ್‌ವಾಜಾ'ದ ಮುಖಾಂತರ M.T.D.C. ಹೋಟೆಲ್ ಹಿಂಭಾಗಕ್ಕೆ ಬಂದೆವು. ಹೋಟೆಲಿಗೆ ಟೀಗೆ ಹೇಳಿ ಎತ್ತರದ ಒಂದು ಗುಡ್ಡ ಹತ್ತಿ ಕುಳಿತೆವು. ಇಷ್ಟರಲ್ಲಾಗಲೇ ದಿನಕರನು ಕೆಂಬಣ್ಣದ ಗೋಳವಾಗಿ ಪಶ್ಚಿಮಾಂಬುದಿಗೆ ಮೆಲ್ಲ ಮೆಲ್ಲನೆ ಜಾರುತ್ತಿದ್ದ ಮನೋಹರ ದೃಶ್ಯವನ್ನು ನೋಡುತ್ತಾ ಕುಳಿತೆವು. ಕುರುಕುಲು ತಿಂಡಿ ಮೆಲ್ಲುತ್ತಾ, ಹಾಗೇ ಕೆಳಗೆ ಬಗ್ಗಿ ನೋಡಿದರೆ ಪ್ರಪಾತದಲ್ಲಿ ಕಾಣುವ ಕೆಳಗಿನ ಭೂಭಾಗದಲ್ಲಿ ಬೆಟ್ಟಗಳ ಮಧ್ಯೆ ನದಿ ಹರಿಯುತ್ತಿದ್ದುದು ಕಂಡು ಬಂದಿತು. ಜನವರಿ ತಿಂಗಳಾದ್ದರಿಂದ ನದಿಗಳಲ್ಲಿ ಅಲ್ಲಲ್ಲಿ ಕೊಂಚ ಕೊಂಚ ನೀರು ಕಾಣುತ್ತಿತ್ತು. ರಾಜಗಡವನ್ನು, ಗಾಂಧಾರಿ, ಮತ್ತು ಸಾವಿತ್ರಿ ನದಿಗಳು ಸುತ್ತುವರಿದಿವೆ. ಇಷ್ಟರಲ್ಲಿ ಸೂರ್ಯಾಸ್ತವಾಗಿ ಎಲ್ಲೆಡೆ ಕೆಂಬಣ್ಣ, ಹೊಂಬಣ್ಣ ತುಂಬಿತ್ತು. ಸಂಧ್ಯಾಕಾಲದ ಸೊಬಗು ಅನುಭವಿಸುತ್ತಿದ್ದಂತೆಯೇ ಪೂರ್ವದಲ್ಲಿ ಕೋಲೆ ಚಂದ್ರನುದಯಿಸಿ ನಿಶೆಯ ಕತ್ತಲನ್ನು ಹೋಗಲಾಡಿಸಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದ. ಚೌತಿಯ ಚಂದ್ರ, ಕಾಂಕ್ರೀಟ್ ಕಾಡಿನಲ್ಲಿ ಕಾಲ ಕಳೆಯುವ ನಮ್ಮಗಳಿಗೆ ಪ್ರಕೃತಿಯ ಮಡಿಲಿನಲ್ಲಿ ತಂಗಾಳಿಯಲ್ಲಿ ಕುಳಿತಾಗ ಬೇರೆಯೇ ಲೋಕದಲ್ಲಿದ್ದಂತಿತ್ತು. ಈ ಸನ್ನಿವೇಶದಲ್ಲಿ ವರ ಕವಿ ಬೇಂದ್ರೇಯವರ ``ಬಿದಿಗೆ ಚಂದ್ರ ಬಂದ ನೋಡೂ, ದೀಪ ಹಚ್ಚಿದಂತೆ ಚೋಡೂ" ಎಂಬ ಸಾಲು ಬಾಯಲಿ ಗುನುಗುತ್ತಿತ್ತು. ಚಳಿ ಹೆಚ್ಚಾದಂತೆ ಎಲ್ಲರೂ ಟೀ ಕುಡಿದು M.T.D.C. ಪ್ರವಾಸಿ ಮಂದಿರ ಸೇರಿದೆವು. ಇನ್ನೂ ಊಟಕ್ಕೆ ಹೊತ್ತಿದ್ದುದರಿಂದ ಮತ್ತೆ ಎಲ್ಲರೂ ಹಾಸ್ಯ ಚಟಾಕಿಗಳನ್ನು ಹಾರಿಸಲು ಹಾಡುಗಳನ್ನು ಹೇಳಲು ಕುಳಿತರು. ಇದರಲ್ಲಿ ವೇಳೆ ಕಳೆದದ್ದೇ ಗೊತ್ತಾಗಲಿಲ್ಲ. 10 ಗಂಟೆಗೆ ಊಟವಾದ ಮೇಲೆ ಕೆಲವರು ಮಲಗುವ ಸನ್ನಾಹದಲ್ಲಿದ್ದಾಗ ಕೆಲ ಉತ್ಸಾಹಿಗಳು ಬಯಲಿನಲ್ಲಿ ಪುರಲೆಗಳನ್ನು ಒಟ್ಟಿ ಬೆಂಕಿ ಹಾಕಿ ಎಲ್ಲರನ್ನೂ ಹೊರಡಿಸಿ ಕೊಂಡು ಹೊರಟರು. ಎಲ್ಲರೂ ಚಳಿಯಲ್ಲಿ ಬೆಂಕಿಯ ಸುತ್ತ ಕುಳಿತಾಗ ನಮ್ಮ ತಂಡದಲ್ಲಿದ್ದ ಪುಟಾಣಿಗಳು ತಮ್ಮ ಹಾಸ್ಯ ಚಟಾಕಿಯಿಂದ, ಹಾಡುಗಳಿಂದ ಎಲ್ಲರನ್ನೂ ಹೊಟ್ಟೆ ಹುಣ್ಣಾಗುವಂತೆ ನಗಿಸಿದರು. ಹಟ್ಟಿ ಮಾಲಿನ್ಯತೆ, ವಾಯು ಮಾಲಿನ್ಯತೆ ಇದರಲ್ಲಿ ಬದುಕುವ ನಾವು ಅನೇಕಾನೇಕ ಚುಕ್ಕಿಗಳ ಕೆಳಗೆ ರಾತ್ರಿಯ ಸ್ವಚ್ಛತೆಯಲ್ಲಿ ಕಳೆದ ಕಾಲ ಹಿತವಾಗಿತ್ತು. 11-45ಕ್ಕೆ ಬಂದು ಕೆಲವರು ಮಲಗಿದರೆ ಮತ್ತೆ ಕೆಲವರು Cards ಹಿಡಿದು ಕುಳಿತು ಪಿಕ್‌ನಿಕನ್ನು ಪೂರಾ ಆಸ್ವಾದಿಸುವ ಯೋಚನೆಯಲ್ಲಿದ್ದರು.

ಮಾರನೆಯ ದಿನ ಎಲ್ಲರೂ ಬೆಳಗ್ಗೆ ಬೇಗ ಎದ್ದು, ಸ್ನಾನಾದಿಗಳನ್ನು ತೀರಿಸಿಕೊಂಡು ಸೂರ್ಯೋದಯ ನೋಡಲು ಕೆಲ ಉತ್ಸಾಹಿಗಳು ಹೊರಟೆವು. ಎತ್ತರದ ಜಾಗ ಆರಿಸಿ ನಿಂತಾಗ ಆದಾಗಲೇ ಗೂಡು ಬಿಟ್ಟು ಹಾರುತ್ತಿರುವ ಹಕ್ಕಿಗಳು, ಅಲ್ಲಲ್ಲೇ ಹೆಸರರಿಯದ ಹೂವು ಬಿಟ್ಟ ಗಿಡಗಳು ಸೂರ್ಯನ ಸ್ವಾಗತಕ್ಕೆ ಅಣಿಯಾದ ಉಷೆ ಆಕಾಶದಲ್ಲಿ ಚೆಲ್ಲಿದ ಬಣ್ಣ ಬಣ್ಣದ ಸೊಬಗಿನ ನೋಟ ಮನಮೋಹಕವಾಗಿತ್ತು. ಹಿಂತಿರುಗಿ ನೋಡಿದರೆ, ಪಕ್ಕಕ್ಕೆ ಕಣ್ಣು ಹೊರಳಿಸಿದರೆ ಕೆಳಗಿನ ಕಣಿವೆಯಲ್ಲಿ ಬಿಡಕಲಾಗಿ ಹರಿಯುತ್ತಿದ್ದ ಗಾಂಧಾರಿ ಮತ್ತು ಸಾವಿತ್ರಿ ನದಿಗಳನ್ನು ಕಾಣುತ್ತಿರುವ ವೇಳೆಗೆ, ಸೂರ್ಯ ತನ್ನ ಮೂಡಣ ಮನೆಯಿಂದ ಮೆಲ್ಲ ಮೆಲ್ಲಗೆ ಮೇಲೇರುತ್ತಿರುವ ದೃಶ್ಯ ಮೋಹಕವಾಗಿತ್ತು. ಸೂರ್ಯೋದಯ ನೋಡಿ ಬಂದ ನಾವು ಕಾಫೀ, ಟೀ,



ಶಿವಾಜಿ ಮಹಾರಾಜರ ಸಮಾಧಿಯ ಬಯಲಲ್ಲಿ ಸದಸ್ಯರ ತಂಡ.
ಹಿಂಬದಿಯಲ್ಲಿ ಕಾಣುವುದು ಜಗದೀಶ್ವರ ಮಂದಿರ

ಕುಡಿದು ಮತ್ತೆ ಪ್ರೇಕ್ಷಣೀಯ ಸ್ಥಳ ನೋಡಲು ಹೊರಟೆವು. ಈಗ ನಾವು M.T.D.C. ರೆಸ್ಟೋರೆಂಟ್ ಹಿಂಭಾಗಕ್ಕೆ ಬರುವ `ನಗರ್ ಖಾನಾ' ದರ್‌ವಾಜಾದಿಂದ ಪ್ರವೇಶಿಸಿ ಪಕ್ಕದಿಂದ ಹೊರಟು ಪ್ರಮುಖ ದ್ವಾರವಾದ `ಪಾಲಖೀ ದರ್‌ವಾಜಾ' ತಲುಪಿದ್ದೆವು. `ಪಾಲಖೀ ದರ್‌ವಾಜಾ'ದ ಹತ್ತಿರ ಕೋಟೆಯ ಗೋಡೆ ಮತ್ತು ಬುರುಜುಗಳು ಮಹಾದ್ವಾರದ ಬಳಿ ಉತ್ತಮ ಸ್ಥಿತಿಯಲ್ಲಿದ್ದು ಅಂದಿನ ವೈಭವದ ಪ್ರತೀಕದಂತಿದೆ. ``ಪಾಲಖೀ ದರ್‌ವಾಜಾ'ದಿಂದ ಹೊಕ್ಕು ಬಂದಾಗ ಹೊರಗಿನ ವಿಶಾಲ ಬಯಲಿನಲ್ಲಿ `ಶಿವ ಛತ್ರಪತಿ'ಯ ಸಿಂಹಾಸನಸ್ಥ ಮೂರ್ತಿ ಸ್ಥಾಪಿಸಿದ್ದಾರೆ. ಈ ಮೂರ್ತಿಯು 6-6-1974ರಂದು ಮಹಾರಾಷ್ಟ್ರ ಸರಕಾರವು ಶಿವ ಛತ್ರಪತಿಯ ಸಿಂಹಾಸನಾರೋಹಣದ 300ನೇ ಜಯಂತ್ಯುತ್ಸವದ ನಿಮಿತ್ತ ಸ್ಥಾಪಿಸಿದ್ದು (ಶಿವಾಜಿಯು 6-6-1674ರಲ್ಲಿ ಪಟ್ಟಾಭಿಷಿಕ್ತನಾಗಿದ್ದ). ಆಗ ಇಲ್ಲಿ ದೊಡ್ಡ ಉತ್ಸವ ನಡೆದಿದೆ. ಅಲ್ಲಿಂದ ಮುಂದುವರೆದರೆ ಎಡ ಭಾಗಕ್ಕೆ ಗಂಗಾ ಸಾಗರವೆಂಬ ಜಲಾಶಯ, ಶಿರ್ಕೋಯಿ ಮಂದಿರ, ಹತ್ತಿ ಶಾಲಾ (ಆನೆಯಲಾಯ) ಇತ್ಯಾದಿಗಳಿವೆ. ಹತ್ತಿಶಾಲಾ ಬರೀ ಅವಶೇಷವಿದೆ. ಇಲ್ಲಿಂದ ಬಲಕ್ಕೆ ಹೊರಳಿ ಹೊರಟರೆ ವಿಶಾಲವಾದ `ಬಾಜಾರ್ ಪೇಟ್'



ಜಗದೀಶ್ವರ ದೇವಸ್ಥಾನದ ಬಾಗಿಲಲ್ಲಿ ಅಸೋಸಿಯೇಶನ್ನಿನ ಸದಸ್ಯರು.

ಸಿಕ್ಕುತ್ತದೆ. ಬಾಜಾರ್ ಪೇಟ್ ಎರಡೂ ಪಕ್ಕದಲ್ಲಿ ಹಬ್ಬಿದೆ. ಇಂತಹ ಸುಭದ್ರ ಹಾಗೂ ವೈಭವವಾದ ಬಾಜಾರ್ ಪೇಟ್ ಉತ್ತರ ಹಿಂದೂಸ್ಥಾನದಲ್ಲೆಲ್ಲೂ ಇಲ್ಲವೆನ್ನುತ್ತಾರೆ. ಈ ಎರಡೂ ಕಡೆಯ ಅಂಗಡಿ ಸಾಲುಗಳ ಮಧ್ಯೆ 40 ಅಡಿ ಅಂತರವಿದೆ, ಎರಡೂ ಸಾಲಿನಲ್ಲಿ 22, 22 ಅಂಗಡಿಗಳಿವೆ. ಇವು ಎತ್ತರದಲ್ಲಿದ್ದು ಕುದುರೆ ಸವಾರರು ಕುದುರೆಯನ್ನಿಳಿಯದೆ ವ್ಯಾಪಾರ ಮಾಡಿಕೊಂಡು ಹೋಗಬಹುದು. ಇಲ್ಲಿ ಗಮನ ಸೆಳೆದ ವಿಷಯವೆಂದರೆ ಈ ಬಾಜಾರ್ ಪೇಟೆಯ ಮಧ್ಯಭಾಗದ ಗೋಡೆಯ ಮೇಲೆ ಹಾವಿನ ಚಿತ್ರ ಕೆತ್ತಲಾಗಿದೆ. ಇದು ನಾಗಶೇಠಿ ಎಂಬ ವಣಿಕನ (ವ್ಯಾಪಾರಿ, ಶೆಟ್ಟಿ) ಅಂಗಡಿಯ ಚಿಹ್ನೆಯಾಗಿತ್ತು. ಈ ವಣಿಕ ಶ್ರೇಷ್ಠ, ಈ ಬಾಜಾರ್ ಪೇಟೆಯ ಸ್ಥಾಪಕನಿರಬೇಕೆನಿಸುತ್ತದೆ. ಬಾಜಾರ್ ಪೇಟ್ ಬಿಟ್ಟು ಹೊರಕ್ಕೆ ಬಂದು ಬಲ ಭಾಗಕ್ಕೆ ತಿರುಗಿ ಪೂರ್ವಕ್ಕೆ ಹೊರಟರೆ ಜಗದೀಶ್ವರ ಮಂದಿರದ ಶಿಖರ ತಾವರೆಯ ಮೊಗ್ಗಿನಾಕಾರದಲ್ಲಿ ಕೋಟೆಯ ಗೋಡೆಯನ್ನು ಮೀರಿ ಕಾಣಿಸುತ್ತದೆ. ಜಗದೀಶ್ವರ ಮಂದಿರ ಬಾಜಾರ್ ಪೇಟ್‌ನಿಂದ 3 ಫರ್ಲಾಂಗ್ ದೂರದಲ್ಲಿದೆ. ಇಲ್ಲಿ ದಾರಿಯಲ್ಲಿ ಹಿಂದೆ ಬ್ರಾಹ್ಮಣರ ವಾಡ (ಬ್ರಾಹ್ಮಣರ ಬೀದಿ) ಇದ್ದಿತಂತೆ. ಇಲ್ಲಿ ಗಂಗಾ ಭಟ್ಟರಂತಹ ಮಹಾಪಂಡಿತೋತ್ತಮರೂ ಇದ್ದಿರಬಹುದು. ದೇವಸ್ಥಾನಕ್ಕೆ ಹೋಗುತ್ತಾ ಎಡ ಭಾಗಕ್ಕೆ ದಿಣ್ಣೆ ಇಳಿದರೆ `ಕೋಳಿಂಬಿ ತಲಾವ್' ಸಿಕ್ಕುತ್ತದೆ. ನಾವು ಜಗದೀಶ್ವರ ಮಂದಿರಕ್ಕೆ ಕೋಟೆ ಗೋಡೆ ದಾಟಿ ಹಿಂಭಾಗದಿಂದ ಪ್ರವೇಶಿಸುತ್ತೇವೆ. ದೇವಾಲಯದ ಮುಂಭಾಗದ ಪ್ರಾಂಗಣದ ಗೋಡೆಯ ಮೇಲೆ ದೇವಾಲಯದ ಸಿಬ್ಬಂದಿಯವರ (ಪೂಜಾರಿ, ರಾಜ ನರ್ತಕಿ, ವಾದ್ಯದವರು) ವಸತಿ ಗೃಹಗಳಿದ್ದುವೆಂದು ಈಗಿನ ಅವಶೇಷಗಳನ್ನು ಕಂಡು ತಿಳಿದು ಬರುತ್ತದೆ. ದೇವಾಲಯ ಪ್ರವೇಶಿಸುವ ಮೊದಲು ನಂದಿಯ ಭವ್ಯ ಮೂರ್ತಿ ಕಾಣುತ್ತದೆ. ಇದು ಭಿನ್ನವಾಗಿದೆ. ದೇವಾಲಯದ ಮೆಟ್ಟಿಲು ಹತ್ತಿ ಒಳಗೆ ಪ್ರವೇಶಿಸುತ್ತಿದ್ದಂತೆಯೇ ವಿಶಾಲವಾದ ಪ್ರಾಕಾರವಿದೆ. ಇದರ ಮಧ್ಯೆ ಬೃಹದಾಕಾರದ ಆಮೆಯೊಂದು ನೆಲದ ಮೇಲೆ ಇದೆ. ನಂತರ ಬರುವ ಗರ್ಭ ಗುಡಿಯಲ್ಲಿ ಶಿವಲಿಂಗ ಚಿಕ್ಕದಿದ್ದು ಸುಂದರವಾಗಿದೆ. ಗರ್ಭ ಗುಡಿಯ ಎದುರು ಭಾಗದ ಗೋಡೆಯಲ್ಲಿ ಒಂದು ಮಾರುತಿ ಕಂಡು ಬರುತ್ತದೆ. ಇದು ಇಲ್ಲಿಯದಲ್ಲ ವೆಂದೆನಿಸುತ್ತದೆ. ದುರ್ಗದ ಯಾವುದೋ ಭಾಗದಲ್ಲಿ ದೇವಸ್ಥಾನ ಬಿದ್ದು ಹೋಗಿ ಆ ಮೂರ್ತಿಯನ್ನು ತಂದಿಟ್ಟಿರಬೇಕು ಎನಿಸುತ್ತದೆ. ದೇವಾಲಯದ ಪ್ರಾಂಗಣ ಬಿಟ್ಟು ಬಂದರೆ ಹೊರಗೆ ಶಿವ ಛತ್ರಪತಿಯ ನಿಧನಾ ನಂತರ ಆತನ ಪಾರ್ಥಿವ ಶರೀರವನ್ನು ದಹನ ಮಾಡಿದ ಜಾಗವಿದು. ಇಲ್ಲಿ ಸ್ಮಾರಕ ನಿರ್ಮಿಸಿದ್ದಾರೆ. ಇಲ್ಲಿ ಮೊದಲು ಅಷ್ಟ ಭುಜಾಕೃತಿಯ ಒಂದು ಕಲ್ಲು ಕಟ್ಟೆ ಇದ್ದಿತೆಂದೂ, ಇಲ್ಲಿ 1906ರಲ್ಲಿ ಭೇಟಿ ಕೊಟ್ಟ `ಲೋಕಮಾನ್ಯ ತಿಲಕರ ನೇತೃತ್ವದಲ್ಲಿ ಈಗಿರುವ ಎತ್ತರದ ಕಟ್ಟೆ ಮಂಟಪ, ಅದರ ಮೇಲೆ ಡೂಂ ಡೂಂ ಹಾಗೂ ಅದರಲ್ಲಿರುವ ಶಿವ ಛತ್ರಪತಿಯ ಅರ್ಧ ಆಕೃತಿಯ ಅಷ್ಟಲೋಹದ ಮೂರ್ತಿಯನ್ನು 1926ರಲ್ಲಿ ಸ್ಥಾಪಿಸಲಾಯಿತೆಂದು ತಿಳಿದು ಬರುತ್ತದೆ. ಈ ಸ್ಮಾರಕದ ಹತ್ತಿರದಲ್ಲಿ `ಶಿವ ಛತ್ರಪತಿಯ ವಿಶ್ವಾಸಿ ನಾಯಿಯ ಸ್ಮಾರಕವಿದೆ. ಇದರ ಹೆಸರು ವಾಘ್ಯಾ (ಅಂದರೆ ಹುಲಿ, ಹುಲ್ಯಾ ಅಂತ)'. ಇದರ ಬಗ್ಗೆ ಒಂದು ರೋಚಕವಾದ ಕಥೆ ಇದೆ. ಶಿವ ಛತ್ರಪತಿಯ ನಿಧನಾ ನಂತರ ಆತನ ಅಂತಿಮ ಯಾತ್ರೆಯಲ್ಲಿ ವಾಘ್ಯಾ ಪಾಲ್ಗೊಂಡಿತ್ತು. ಆತನ ಅಂತ್ಯ ವಿಧಿ ನೆರವೇರುತ್ತಿದ್ದಾಗ ಅದು ಒಂದೇ ಸಮ ಅಳುತ್ತಿತ್ತಂತೆ. ಯಾವಾಗ ಶಿವ ಛತ್ರಪತಿಯ ಚಿತೆಗೆ ಅಗ್ನಿ ಸ್ಪರ್ಶವಾಯ್ತೋ ಹತ್ತಿ ಉರಿಯುತ್ತಿದ್ದ ಚಿತೆಗೆ ವಾಘ್ಯಾ ಹಾರಿ ಬಿದ್ದಿತು. ತನ್ನ ಸ್ವಾಮಿಯನ್ನಗಲಿ ಜೀವಿಸಲಾರದ ಸ್ವಾಮಿ ಭಕ್ತ ವಾಘ್ಯಾ ತನ್ನ ಸ್ವಾಮಿಯನ್ನು ಈ ರೀತಿ ಹಿಂಬಾಲಿಸಿತು. ಸ್ವಾಮಿ ಭಕ್ತ ವಾಘ್ಯಾನಿಗೆ ಸ್ಮಾರಕ ನಿರ್ಮಿಸಿದ್ದು ಉಚಿತವೇ ಆಗಿದೆ.

ಇಲ್ಲಿಂದ ಮುಂದುವರೆದರೆ 3, 4 ಫರ್ಲಾಂಗ್ ನಡೆದರೆ ಭವಾನಿ ಮಂದಿರವಿದೆ. ಇದು ಮಾನವ ನಿರ್ಮಿತ ಮಂದಿರವಲ್ಲ, ನೈಸರ್ಗಿಕವಾದ ಗುಹೆ (ಇಲ್ಲಿ ಗೈಡುಗಳಾರೂ ಇಲ್ಲದ್ದರಿಂದ ದೇವಸ್ಥಾನ ಇರುವುದೆಲ್ಲೆಂದು ತಿಳಿಯದೆ ಅನೇಕರಿಗೆ ಇದನ್ನು ನೋಡಲಾಗಲಿಲ್ಲ) ಅತೀ ಆಳವಲ್ಲದ ಗುಹೆ ಇದಾಗಿದೆ. ಇಲ್ಲಿ ಮುಂದೆ ಚಾಚಿರುವ ಬಂಡೆಯೇ ಉದ್ಭವ ಮೂರ್ತಿ ಭವಾನಿ. ದೇವಾಲಯದ ಸುತ್ತ ಮುತ್ತಿನ ವಾತಾವರಣ ನೈಸರ್ಗಿಕವಾಗಿಯೂ, ಜನರಹಿತ ವಾಗಿಯೂ ಸುಂದರವಾಗಿಯೂ ಇದೆ.

ಇಲ್ಲಿ ಇನ್ನೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ. ಇದರಲ್ಲಿ `ಟಕ್ ಮಕ್ ಟೋಕ್' ಅತೀ ಎತ್ತರದ ಶಿಖರ ಇದಾಗಿದೆ. ಇಲ್ಲಿಂದ ಸುತ್ತ ಮುತ್ತಿನ ಪ್ರದೇಶವೆಲ್ಲಾ ಕಾಣಿಸುತ್ತದೆ. ಬಾರಾ ಟಾಕಿ, ಇದು ನೀರನ್ನು ಶುದ್ಧೀಕರಿಸಿ ಕುಡಿಯುವ ನೀರು ಪೂರೈಸುವ ಸ್ಥಳ, ಕಾಶೀಬಾಯಿಯ ಸಮಾಧಿ ಈಕೆ ಶಿವ ಛತ್ರಪತಿಯ ಪ್ರೇಮಪತ್ನಿ.

ರಾಯಘಾಡದ ಐತಿಹ್ಯ: ರಾಯಗಡವು ಶಿವ ಛತ್ರಪತಿಯ ವಶಕ್ಕೆ ಬರುವುದಕ್ಕೆ ಮುಂಚೆ, ಆದಿಲ್‌ಶಾಹೀ, ಸರದಾರನಾದ `ಜಾವಳೀ ಮೋರ್' ಎನ್ನುವವನ ವಶದಲ್ಲಿತ್ತು. ಯುದ್ಧವಿಲ್ಲದೆ ಬರಿ ಮಾತುಕತೆ ಇಂದ ರಾಯಗಡ ಶಿವ ಛತ್ರಪತಿಗೆ ಸಿಕ್ಕಿತು. ಇದಕ್ಕೆ ಆಗ `ರಾಯರಿ ಐವಜಿ' ಎಂದು ಹೆಸರಿದ್ದಿತು. ಸೆಪ್ಟೆಂಬರ್ 4, 1667ರಂದು ಇದಕ್ಕೆ ಶಿವ ಛತ್ರಪತಿಯು `ರಾಯಗಡ' ಎಂದು ನಾಮಕರಣ ಮಾಡಿದ. ಶಿವ ಛತ್ರಪತಿಯು ಮೂಲದಲ್ಲಿ ಚಿತ್ತೂರಿನ ರಾಜ ಮನೆತನಕ್ಕೆ ಸೇರಿದವನಾಗಿದ್ದು ಚಿತ್ತೂರಿನ ಕೋಟೆಯಂತಹದೇ, ಅಂದರೆ ಬೆಟ್ಟ ಗುಡ್ಡಗಳಿಂದ ಕೂಡಿ ಅಭೇದ್ಯವಾದ ಕೋಟೆಯ ಕನಸು ಕಾಣುತ್ತಾ ಹುಡುಕುತ್ತಿದ್ದ. `ರಾಯರಿ ಐವಜಿ' ಅವನ ಕಣ್ಣಿಗೆ ಬಿದ್ದಾಗ ``ಇದೇ ನನಗೆ ಬೇಕಾದ್ದು'' ಎಂದನಂತೆ ತನ್ನ ವಶಕ್ಕೆ ತೆಗೆದು ಕೊಂಡ ನಂತರ ಶಿವಾಜಿಯು ಅದರ ಕೆಲವು ಭಾಗಗಳನ್ನು ಹೊಸದಾಗಿ ಕಟ್ಟಿಸಿದ. ಮತ್ತೆ ಕೆಲವು ಭಾಗಗಳನ್ನು ರಿಪೇರಿ ಮಾಡುವುದರ ಮೂಲಕ ದುರ್ಗವನ್ನು ಎಲ್ಲಾ ರೀತಿಯಲ್ಲೂ ಬಿಗಿ ಮಾಡಿ ಕೊಂಡ. ಇವನ ವಾಸ್ತು ಶಿಲ್ಪ ತಜ್ಞ `ಹಿರೋಜಿ ಇಂದುರ್‌ಕರ್' ಎಂಬಾತನ ನೇತೃತ್ವದಲ್ಲಿ ಈ ಕೆಲಸ ನಡೆಯಿತು.

1680 ರಾಯಗಡವು ತನ್ನ ನೆಚ್ಚಿನ ನಾಯಕನನ್ನು ಕಳೆದುಕೊಂಡಿತು (ಶಿವಾಜಿಯ ಮರಣ).

(ಪುಟ 11ಕ್ಕೆ)

# ಇದು ನಮ್ಮ ಪ್ರಾಚೀನ ಭಾರತ

-3-

● ಎಸ್. ಆನಂದಶಾಸ್ತ್ರೀ, ಮೈಸೂರು

ಕ್ರಿಸ್ತಪೂರ್ವ 4 - 3ನೇ ಶತಮಾನದಲ್ಲಿ ಮಗಧದ ಮೌರ್ಯಸಾಮ್ರಾಜ್ಯವು ನಮ್ಮಲ್ಲಿ ಮೊದಲಬಾರಿಗೆ ಉತ್ತರ ಭಾರತವನ್ನು ದಾಟಿ ಮಧ್ಯ ಏಷಿಯಾದ ಮೆಟ್ಟಲನ್ನು ಮುಟ್ಟಿತು. ಅದರ ನಂತರ ಶಕ-ಕುಶಾಣರ ಕಾಲದಲ್ಲಿ ಹೊರದೇಶದೊಡನೆ ಸಂಪರ್ಕ ಹೆಚ್ಚಾಯಿತು. ಬೌದ್ಧ ಧರ್ಮದ ಮಹಾಯಾನ ಸಂಪ್ರದಾಯವು ಶುರುವಾಗಿ ಅಲ್ಲಿಯವರೆಗೂ ಬೌದ್ಧ ಧರ್ಮದ ಹೀನಯಾನದ ಅನುಷ್ಠಾನದಂತೆ ಬುದ್ಧನನ್ನು ಕೇವಲ ಚಿನ್ಹೆಗಳಿಂದಲೇ ತೋರಿಸುತ್ತಿದ್ದು ಅಫಘಾನಿಸ್ತಾನದ ಗಂಧಾರ ದೇಶದ ಶಿಲ್ಪಕಲೆಯು ಗ್ರೀಕರ ಪ್ರೇರಣೆಯಿಂದ ಮನುಷ್ಯ ರೂಪದಲ್ಲಿ ಚಿತ್ರಿಸಲು ಶುರುಮಾಡಿತು. ಮಹಾಯಾನ ಸಂಪ್ರದಾಯವು ಹೊಸ ಹೊಸ ಎಲ್ಲ ಜನರ ನೀತಿ ರೀತಿ, ಸಂಸ್ಕೃತಿಗಳನ್ನು ತನ್ನ ಒಳಗೆ ಹಾಕಿಕೊಂಡು ಭಾರತವನ್ನು ಹಿಂದೆ ಬಿಟ್ಟು ದಾಪುಗಾಲು ಹಾಕಿಕೊಂಡು ನಡೆಯುತ್ತಾ ನಿಜವಾಗಿಯೂ ಮಹಾಯಾನ - ದೊಡ್ಡ ಬಂಡಿಯೇ ಆಯಿತು. ಆ ಕಾಲದಲ್ಲೇ ಮಧ್ಯ ಏಷಿಯಾದ `ಅನಾಗರಿಕ ಅಲೆಮಾರಿ ಜನರು ಸಾರಾಸಗಟು ಇದರ ಪ್ರಭಾವಕ್ಕೆ ಒಳಗಾಗಿ ಬೌದ್ಧ ಧರ್ಮೀಯರಾದದ್ದು!

ಮಗಧಕ್ಕೆ (ಈಗಿನ ಬಿಹಾರ) ಸೀಮಿತವಾಗಿದ್ದ, ಹೀನಯಾನಕ್ಕೆಂದೇ ಹೇಳಿ ಮಾಡಿಸಿದಂತೆ ಇದ್ದ ಪಾಲಿಭಾಷೆಯನ್ನು ತೊರೆದು ಮಹಾಯಾನವು ವಿಶ್ವ ಧರ್ಮಕ್ಕೆ ಅನುಗುಣವಾಗಿ ಸಂಸ್ಕೃತವನ್ನು ತನ್ನದಾಗಿ ಮಾಡಿಕೊಂಡು ಮುಂದೆ ಸಂಸ್ಕೃತ ಭಾಷೆಯು ಹೊರದೇಶದಲ್ಲಿ ಬೌದ್ಧರ ಧಾರ್ಮಿಕ ಭಾಷೆಯಾದಾಗ ಸಂಕರ ಸಂಸ್ಕೃತ (ಹೈಬ್ರಿಡ್ ಸ್ಯಾನ್ಸ್‌ಕ್ರಿಟ್) ಎಂದೆ ಆಯಿತು! ಚೀನಾ ಇತ್ಯಾದಿ ಬೌದ್ಧ ದೇಶಗಳ ಸದ್ಧರ್ಮ ಪುಂಡರೀಕ (ನಮ್ಮ ಭಗವದ್ಗೀತೆಯಂತೆ) ದಂತಹ ಇತರ ಬೌದ್ಧ ಧರ್ಮ ಗ್ರಂಥಗಳು ಅದರಲ್ಲಿ ರಚಿತವಾದವು. ಚೀನಾ, ಜಪಾನ್ ಇತ್ಯಾದಿ ದೇಶಗಳಲ್ಲಿ ಭಾರತದಿಂದ ಹೋದ ಬೌದ್ಧ ಭಿಕ್ಷುಗಳು ಮತ್ತು ಅವರ ಶಿಷ್ಯರಾದ ಸ್ಥಳೀಯ ಬೌದ್ಧ ವಿದ್ವಾಂಸರು ಅವುಗಳನ್ನು ಆಯಾ ಭಾಷೆಗಳಲ್ಲಿ ಭಾಷಾಂತರಿಸಿದರು. ಕೇವಲ ಸಂಸ್ಕೃತದ ಶ್ಲೋಕ ಬರೆದ ಕಾಗದ ಅಥವಾ ತಾಡಪತ್ರವನ್ನು ಮುಳುಗಿಸಿಟ್ಟ ನೀರು ಬಾಯಿಲೆಗಳನ್ನು ವಾಸಿಮಾಡುವುದೆಂಬ ಮೂಢ ನಂಬಿಕೆ ಬರುವಷ್ಟು ಆ ಲಿಪಿಗೆ ಪೂಜನೀಯ ಸ್ಥಾನವಿತ್ತು.

ಭಾರತದಿಂದ ಚೀನಾ ತಲುಪುವುದೇನೂ ಸುಲಭ ಸಾಧ್ಯವಾಗಿರಲಿಲ್ಲ. ದಕ್ಷಿಣದಲ್ಲಿ ಸಮುದ್ರಯಾನ ಈಗಿನ ಇಂಡೋನೇಷಿಯಾ ಮತ್ತು ದಕ್ಷಿಣ ಚೀನಾ ಸಮುದ್ರದ ಮುಖಾಂತರ ಇತ್ತು. ಉತ್ತರದಲ್ಲಿ ರೇಷ್ಮೆ ಮಾರ್ಗ (ಸಿಲ್ಕ್‌ರೂಟ್)ವಂತೂ ಬಹಳ ದುರ್ಗಮವಾಗಿತ್ತು. ಅದು ಅಫಘಾನಿಸ್ತಾನದ ಉತ್ತರದಿಂದ ಹೊರಟು ಮಧ್ಯ ಏಷಿಯಾದ ಸಿಂಕಿಯಾಂಗ್ (ಈಗಿನ ಸಿನ್ ಜಿಯಾಂಗ್) ಮತ್ತು ಗೋಬಿ ಮರುಭೂಮಿಯ ಮುಖಾಂತರ ಹೋಗುತ್ತಿತ್ತು. ಆ ಮರುಭೂಮಿಗೆ ಟಕಲಿಮಕನ್ (ನೀನು ಅದರ ಒಳಗೆ ಹೋದರೆ ಹೊರಗೆ ಬರಲೇ ಆರೆ!) ಎಂದು ಅದರ ಕುಖ್ಯಾತ ಹೆಸರು. ಆ ಹೆಸರೇ ಹೇಳುವಂತೆ ಅದು ಎಷ್ಟು ಭಯಂಕರವಾಗಿತ್ತು ಎಂದು ತೋರಿಸುತ್ತದೆ. ಇಷ್ಟಾದರೂ ಅದರ ಮೂಲಕವೇ ಗ್ರೀಕ್ ಸಂಸ್ಕೃತಿ, ಹಿಂದೂ, ಬೌದ್ಧ ಮತ್ತು ಮಹಮ್ಮದೀಯ ಧರ್ಮಗಳು ಚೀನಾವನ್ನು ತಲುಪಿದವು. ಕ್ರಿ.ಶ. ಆರು-ಏಳನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಹ್ಯೂಯನ್ ತ್ಸಾಂಗ್ ಆ ದಾರಿಯಲ್ಲೇ ವಾಪಸು ಹೋಗಿದ್ದು. ಧರ್ಮ ಅಥವಾ ಧನದ ತೀವ್ರ ಇಚ್ಛಾಶಕ್ತಿಯುಳ್ಳ ಸಾಹಸಿಗಳೇ ಅಂತಹ ಕಷ್ಟಗಳನ್ನು ಸಹಿಸಿಕೊಳ್ಳಬಲ್ಲವರಾಗಿದ್ದರು. ಆದರೂ ಆ ದಾರಿಯಲ್ಲೇ ಇದ್ದ ಬೌದ್ಧ ಮಠಗಳು, ಸ್ತೂಪಗಳು, ವಿಹಾರಗಳು ಕ್ರಿ.ಪೂ. ಮೂರು, ಎರಡನೇ ಶತಮಾನದಿಂದಲೇ ಅಲ್ಲಿ ಭಾರತೀಯ ಸಂಸ್ಕೃತಿಯ ಧ್ವಜವನ್ನು ಎತ್ತಿ ತೋರಿಸುವ ಪ್ರತೀಕಗಳಾಗಿದ್ದವು.

ಏಷಿಯಾ ಖಂಡದ ಪೂರ್ವಾಂಚಲದಲ್ಲಿ ಚೀನಾ ದೇಶವು ತಾನು ಉಚ್ಚ ಸಂಸ್ಕೃತಿಯ ದೇಶವೆಂದೇ ಗಣಿಸಿಕೊಂಡು ರೇಷ್ಮೆ ಇತ್ಯಾದಿ ವ್ಯಾಪಾರ ಸಂಬಂಧ ಮಾತ್ರ ಇಟ್ಟುಕೊಂಡು ಪಶ್ಚಿಮದ ನಮ್ಮ ಎಲ್ಲರೊಡನೆಯೂ ಮುಖ ತಿರುಗಿಸಿಕೊಂಡು ಕೂತಿತ್ತು. ಕ್ರಿ.ಪೂ. ಮೂರನೇ-ಎರಡನೇ ಶತಮಾನದಲ್ಲಿ ಆಗಲೇ ಮಧ್ಯ ಏಷಿಯಾದಲ್ಲಿ ಪಸರಿಸಿದ್ದ ಆ ದುರ್ಗಮ ರೇಷ್ಮೆ ಮಾರ್ಗದಿಂದಲೇ ಹೋದ ಬೌದ್ಧ ಧರ್ಮ ತನ್ನ ಬಾಗಿಲು ತಟ್ಟಿದಾಗ ಚೀನಾದೇಶ ಅದನ್ನು ಇದೂ ಒಂದು ``ಅನಾಗರಿಕ ಪಶ್ಚಿಮದ ಬರ್ಬರ ಧರ್ಮ'' ಎಂತಲೇ ಎಣಿಸಿತು. ಕಾರಣ, ಅದರ ಪಶ್ಚಿಮಕ್ಕೆ ಇದ್ದವೆಲ್ಲಾ ಮಧ್ಯ ಏಷಿಯಾದ ಅಸಂಸ್ಕೃತ ಅಲೆಮಾರಿ ಜನ - ಯಾರು ಅವರಿಗೂ ನಮಗೂ ಸದಾ ತೊಂದರೆ ಕೊಡುತ್ತಿದ್ದರೋ ಅವರು. ಆಶ್ಚರ್ಯವೇನೆಂದರೆ ಮೊದಲ ಬೌದ್ಧ ಧರ್ಮವನ್ನು ಕುರಿತು `ಬರ್ಬರ ಪಶ್ಚಿಮದ ಧರ್ಮ' (ರಿಲಿಜನ್ ಫ್ರಮ್ ದ ಬಾರ್‌ಬೇರಿಯನ್ ವೆಸ್ಟ್) ಅಂತಲೇ ತನ್ನ ಲಿಪಿಯಲ್ಲಿ ಚಿತ್ರಿಸುತ್ತಿತ್ತು. ಹ್ಯಾನ್ ಸಾಮ್ರಾಜ್ಯದಲ್ಲಿ ಅಂದರೆ ಕ್ರಿ.ಶ. 70ರಲ್ಲಿ ಅದಕ್ಕೆ ಅಧಿಕೃತ ಮನ್ನಣೆ ಕೊಟ್ಟಿತು. ಈ ಬೌದ್ಧ ಧರ್ಮವು ಎಷ್ಟೇ ಕಷ್ಟವಾದರೂ ಸಹಿಸಿಕೊಂಡು ಚೀನಾದ ತಾವೋ ಮತ್ತು ಕನ್‌ಫ್ಯೂಷಿಯನಿಸಮ್ ಧರ್ಮಗಳೊಡನೆ ಅಳವಡಿಸಿಕೊಂಡು ಹೋಗಿ ಇವತ್ತು ಅತೀ ಹೆಚ್ಚಿನ ಜನಸಂಖ್ಯೆ ಆ ಧರ್ಮದ್ದಾಗಿದೆ.

ಮೊದಲೇ ಹೊರದೇಶ, ನಮ್ಮಿಂದ ವಿಪರೀತವಾದ ಅಲ್ಲಿಯ ಸಂಸ್ಕೃತಿ, ಅರ್ಥವಾಗದ ಭಾಷೆ. ದುರ್ಗಮದಾರಿ ಇವುಗಳನ್ನೆಲ್ಲಾ ಸ್ಥೈರ್ಯದಿಂದ ಜಯಿಸಿ ತನ್ನ ಧರ್ಮವನ್ನು ಆ `ಅಧರ್ಮೀಯ' ಜನರಲ್ಲಿ ಬಿತ್ತುವುದೇನೂ ಸಾಧಾರಣ ಕಾರ್ಯವಾಗಿರಲಿಲ್ಲ. ಅಂತಹ ಚೀನಾ ದೇಶವನ್ನು ಕ್ರಿ.ಶ. 61-67ರಲ್ಲೇ ಪ್ರಥಮತಃ ಬೌದ್ಧ ಧರ್ಮೀಯರನ್ನಾಗಿ ಮಾಡಲು ಸಾಹಸ ಪಟ್ಟವರು ನಮ್ಮ ಬೌದ್ಧ ಭಿಕ್ಷು ಕಾಶ್ಯಪ ಮಾತಂಗ! ಪರಿಪುಷ್ಟವಾಗಿ ಬೆಳೆದ ಆ ಸಂಕರ ಸಂಸ್ಕೃತದ ಬಗ್ಗೆ ಬಹಳ ವರ್ಷಗಳ ಹಿಂದೆ ನಡೆದ ಒಂದು ಸಂಗತಿ. ಹಾರ್ವರ್ಡ್ ವಿಶ್ವ ವಿದ್ಯಾನಿಲಯದ ಪ್ರೊಫೆಸರ್ ಎಡ್‌ಗರ್‌ಟನ್‌ರವರು ಮೈಸೂರಿನ ವಿದ್ವತ್ ಸಭೆಯೊಂದರಲ್ಲಿ ಸಂಸ್ಕೃತದಲ್ಲಿ ಮಾತನಾಡಿದಾಗ (ಒಬ್ಬರು ಹೇಳಿದಂತೆ, ಟೀಕೆ ಮಾಡಲೆಂದೇ ಕಾಲು ಕೆರೆದು ಕೊಂಡು ಕಾಯುತ್ತಿದ್ದ, ಅದಕ್ಕೇ ಹೆಸರಾಗಿದ್ದ) ವಿದ್ವತ್ ವೃಂದವು ಭಾಷಣವನ್ನು ತುಟಿಪಿಟಿಕ್ ಅನ್ನದೆ ಕೇಳಿ ಬಹಳ ಸಂತೋಷದಿಂದ ಕರತಾಡನಮಾಡಿತ್ತಂತೆ. ಆ ``ಮ್ಲೇಚ್ಛ'' ವಿದ್ವಾಂಸರ ಭಾಷಣವನ್ನು ಆಯೋಜಿಸಿದ ಸಂಸ್ಕೃತ ಪ್ರಿಯರು ಸದ್ಯ ಬದುಕಿದೆವು ಅಂತ ದೀರ್ಘವಾಗಿ ಉಸಿರಾಡಿದರಂತೆ! ಗುಪ್ತರ ಅಂತ್ಯ ಕಾಲದಲ್ಲಿ ಅಂದರೆ ಕ್ರಿ.ಶ. 5ನೇ ಶತಮಾನದ ಎರಡನೇ ಭಾಗದಲ್ಲಿ ವರಾಹ ಮಿಹಿರ ನಮ್ಮ ಬಹು ಖ್ಯಾತ ಖಗೋಳ ಶಾಸ್ತ್ರ ಪಂಡಿತ. ಆತ ಅಷ್ಟೇ ಭಾಷಾ ಪಂಡಿತನೂ ಸಹ. ಬೃಹತ್ ಸಂಹಿತೆ ಮತ್ತು ಬೃಹತ್ ಜಾತಕದಲ್ಲಿ ತನ್ನ ಕಾವ್ಯ ಪ್ರೌಢಿಮೆಯನ್ನು ತೋರಿಸಿದ್ದಾನೆ. ಆ ಕಾಲದಲ್ಲಿ ಖಗೋಳ ಶಾಸ್ತ್ರ ಮತ್ತು ಜ್ಯೋತಿಷ್ಯ ಜೊತೆಗೇ ಅಭ್ಯಸಿಸಲ್ಪಡುತ್ತಿತ್ತು. ನಮ್ಮ ಆಧುನಿಕ ಯುಗದಲ್ಲಿ 1930-40ರ ವರೆಗೂ ಮನಶ್ಶಾಸ್ತ್ರ (ಸೈಕಾಲಜಿ)ವು ದರ್ಶನ (ಫಿಲಾಸಫಿ) ಶಾಸ್ತ್ರದ ಅಂಗವೇ ಆಗಿರಲಿಲ್ಲವೇ?

ವರಾಹ ಮಿಹಿರ ಹೇಳುವುದನ್ನು ಕೇಳಿ, ``ಯವನನಾದರೇನು? ಮ್ಲೇಚ್ಛನಾದರೇನು?

ಜ್ಯೋತಿಷ್ಯದಲ್ಲಿ ಪ್ರವೀಣನಾದ ಬ್ರಾಹ್ಮಣನ ಸಮಾನನಾದ ಆತ ಋಷಿಯಂತೆಯೇ ಪೂಜ್ಯ ಯೋಗ್ಯ" ಎಂದ ವರಾಹ ಮಿಹಿರನು ಗ್ರೀಕರ (ಯವನ : ಮ್ಲೇಚ್ಛ) ಪಾಂಡಿತ್ಯವನ್ನು ಹೊಗಳುತ್ತಾನೆ. ಆ ಗ್ರೀಕರೂ ಖಗೋಳ ಶಾಸ್ತ್ರದಲ್ಲಿ ಪರಿಣಿತರಾಗಿದ್ದರು. ಅವರ ಜ್ಞಾನವನ್ನು ವರಾಹ ಮಿಹಿರನ ಗ್ರಂಥಗಳಲ್ಲಿ ಕಾಣಬಹುದು. ಆತ ತನ್ನ ಹಿಂದಿನ ಶತಮಾನದಲ್ಲಿ ಆಗಿ ಹೋದ ಕುಸುಮಪುರ, ಪಾಟಲಿಪುತ್ರದ (ಈಗಿನ ಪಾಟ್ನಾ)ದ ನಮ್ಮ ಗಣಿತ ಮತ್ತು ಖಗೋಳ ಶಾಸ್ತ್ರದ ಪ್ರಚಂಡ ತಾರೆ ಆರ್ಯಭಟನನ್ನು ಜ್ಞಾಪಿಸಿಕೊಳ್ಳುತ್ತಾನೆ. ಆರ್ಯಭಟ ಗಣಿತವನ್ನು ಖಗೋಳ ಶಾಸ್ತ್ರದಿಂದ ಬೇರ್ಪಡಿಸಿ ಅಧ್ಯಯನ ಮಾಡಲು ಪ್ರಯತ್ನ ಮಾಡಿದವನು. ಬೀಜಗಣಿತದ (ಅಲ್ಜೀಬ್ರಾ) ಸಮೀಕರಣಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದು, ಘನಗಳ ಅಳತೆ, ಗಾತ್ರ ಇತ್ಯಾದಿ, ಪ್ರೋಗ್ರೆಷನ್, ಇನ್‌ವೊಲ್ಯೂಷನ್, ಎವೊಲ್ಯೂಷನ್, ಪ್ರಥಮ ದರ್ಜೆಯ ಅಸಮೀಕರಣಗಳು ಇತ್ಯಾದಿಗಳು ಮತ್ತು ಗಣಿತದ ಬಹುಮುಖ್ಯ ಧ್ರುವ ಸಂಖ್ಯೆ ಕಾನ್‌ಸ್ಟೆಂಟ್ ಪೈಯ ಬೆಲೆಯನ್ನು 3.1416 ಎಂದು ಕಂಡು ಹಿಡಿದಿದ್ದರ ಗೌರವ ಈತನಿಗೆ ಸಲ್ಲಬೇಕು. ಅದೆಲ್ಲಕ್ಕಿಂತ ಪಾಶ್ಚಾತ್ಯ ಖಗೋಳ ಶಾಸ್ತ್ರಜ್ಞರು ಶತಮಾನಗಳ ಮುಂದೆಯೂ ಇಸಾಯಿ (ಚರ್ಚಿನ) ಧರ್ಮಗುರುಗಳಿಂದ ಭಯಭೀತರಾಗಿ ಹೇಳಲು ಹೆದರಿದ್ದ, ಭೂಮಿಯು ಗುಂಡಗೆ ತನ್ನ ಅಕ್ಷದಲ್ಲೇ ತಿರುಗುತ್ತದೆ ಎಂಬ ಸಿದ್ಧಾಂತವನ್ನು ಈತ ಆರ್ಯಭಟ 5ನೆ ಶತಮಾನದಲ್ಲೇ ನಿರ್ಧರಿಸಿದ. ಗ್ರಹಣಗಳಿಗೆ ಕಾರಣ ರಾಹು ಕೇತುಗಳಲ್ಲ, ಸೂರ್ಯನ ಬೆಳಕು ಕತ್ತಲೆಯೊಡನೆ ಚಂದ್ರ ಭೂಮಿಯ ಜೂಟಾಟ ಎಂದು ಆತ ನಿಖರವಾಗಿ ಹೇಳಿದ್ದರೂ ಶತಮಾನ ನಂತರದ ಖಗೋಳಶಾಸ್ತ್ರಜ್ಞರಾದ ಆರ್ಯಭಟನಾಗಲೀ, ಬ್ರಹ್ಮಗುಪ್ತನಾಗಲೀ ಈ ಮಹತ್ವಪೂರ್ಣ ಸಂಶೋಧನೆಯನ್ನು ಸ್ವೀಕರಿಸುವ ಸಾಹಸ ತೋರಿಸಲಿಲ್ಲ. ಬದಲು ಅಪಹಾಸ್ಯವನ್ನೇ ಮಾಡಿದರು. ಈ ವೈಜ್ಞಾನಿಕರ ಬುದ್ಧಿಗೇ ಗ್ರಹಣ ಹಿಡಿದು ವಿವೇಚನೆಯನ್ನೇ ಕಳೆದುಕೊಂಡಿದ್ದರು. ಹಿಂದಿನ ವೇದ, ಮನುಸ್ಮೃತಿ ಮತ್ತು ಗರ್ಗಸಂಹಿತೆಯಲ್ಲಿ `ಗ್ರಹಣಕ್ಕೆ ರಾಹುವೇ ಕಾರಣ' ಎಂಬ ``ವೇದವಾಕ್ಯ"ದ ಎದುರಿಗೆ ಉಸಿರೆತ್ತುವ ಧೈರ್ಯ ತೋರಲಿಲ್ಲವೇನೋ? ಎಂತಹ ಸುಂದರ ಗುಲಗಂಜಿಯಾದರೂ ಅದಕ್ಕೊಂದು ಕಪ್ಪು ಚುಕ್ಕೆ ಇರುತ್ತದೆಯಂತೆ! ಆತನ ಮತ್ತೊಂದು, ಸಾಧಾರಣವೆನಿಸಿದರೂ, ಮಹತ್ವಪೂರ್ಣ ಸಂಶೋಧನೆ ಆಧುನಿಕ ವಿಜ್ಞಾನದ ಅಡಿಗಲ್ಲು (ಡೆಸಿಮಲ್ ಸಿಸ್ಟಮ್) ದಶಮಾನ ಪದ್ಧತಿ. ಈ ಪದ್ಧತಿ ಹಿಂದೂ ಗಣಿತದ ಧ್ಯೇಯ. ಅದಕ್ಕಿಂತ ಪುರಾತನವಾಗಿ ಸುಮಾರು ಕ್ರಿ.ಪೂ. 2300ದ ಹರಪ್ಪ ಸಂಸ್ಕೃತಿಯ ಗುಜರಾತಿನ ಲೋಥಲ್ ಉತ್ಖನನದಲ್ಲಿ ನಮಗೆ ಸಿಕ್ಕಿದ್ದು ಒಂದು ದಂತದ ``ಇಂಚು ಪಟ್ಟಿ" ಅದರಲ್ಲಿ ಪ್ರತಿ ಹತ್ತನೆ ರೇಖೆ ಉದ್ದವಾಗಿ ಸಂಕೇತಿಸಿದೆ!

ದಿವಂಗತ ರಾಹುಲ ಸಾಂಕೃತ್ಯಾಯಯನರು ಬೌದ್ಧ ಸಾಹಿತ್ಯದ ಪ್ರಚಂಡ ಪಂಡಿತರು ಮತ್ತು ಅಷ್ಟೇ ಭಾವುಕ ಜೀವಿ. ಅವರ ಅಲೆಮಾರಿ ಚೇತನ (ವಾಂಡರ್‌ಲಸ್ಟ್)ದ ಫಲವಾಗಿ ಅವರು ಭಾರತಾತೀತ ಭಾರತ (ಗ್ರೇಟರ್ ಇಂಡಿಯಾ)ದಲ್ಲಿ ಅಂದರೆ ಟಿಬೆಟ್, ಚೀನಾ, ಮಂಗೋಲಿಯಾ ಇತ್ಯಾದಿ ದೇಶಗಳಲ್ಲಿ ಪ್ರವಾಸ ಮಾಡಿದ ಬಗ್ಗೆ ಹಿಂದೀ ಸಾಹಿತ್ಯದಲ್ಲಿ ಅವರ ರೋಚಕ ಅನುಭವಗಳಿವೆ. ಮಂಗೋಲಿಯಾದ ಜನ ಭಗವಾನ್ ಬುದ್ಧನ ಜನ್ಮಭೂಮಿಯವರೆಂದು ನಮ್ಮ ವಿಷಯದಲ್ಲಿ ಬಹಳ ಔದಾರ್ಯದಿಂದ ನಡೆದುಕೊಳ್ಳುತ್ತಾರೆಂದು ಅವರು ನೆನೆಸಿಕೊಳ್ಳುವುದು ಬಹಳ ಹೃದಯಸ್ಪರ್ಶಿಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಮ್ಮ ಪ್ರೊಫೆಸರ್ ದಿವಂಗತ ಕೆ. ಎ., ನೀಲಕಂಠಶಾಸ್ತ್ರಿಗಳು ಇತಿಹಾಸದ ಪ್ರಖ್ಯಾತ ಪಂಡಿತರು. ಅವರು ಭಾರತಾತೀತ ಭಾರತದಲ್ಲಿ ಓಡಾಡಿದವರು. ಸಾಧಾರಣವಾಗಿ ಅವರು ಭಾವುಕರೇ ಅಲ್ಲ. ಅವರಲ್ಲಿ ತರ್ಕಕ್ಕೇ ಹೆಚ್ಚು ಬೆಲೆ. ಅಂತಹವರು ಆ ದೇಶದವರು ``ಹಿಂದೂ, ಬೌದ್ಧ ಧರ್ಮದ ನೆಲೆಯಾದ ಪುಣ್ಯಭೂಮಿಯ ಜನ", ಎಂದು ತಮ್ಮವರೇ ಎಂಬಂತೆ ನಮ್ಮನ್ನೂ ಬಹಳ ಆದರದಿಂದ ನಡೆಸಿಕೊಳ್ಳುವುದನ್ನು ಒಂದು ಸಾರಿ ಜ್ಞಾಪಿಸಿಕೊಳ್ಳುತ್ತಾ, ``ಅವರನ್ನೆಲ್ಲಾ ನಾವು ಈಗ ಮರೆತಿದ್ದೇವೆ. ನಮ್ಮಲ್ಲಿ ಈಗ ಪಶ್ಚಿಮದ್ದೇ ಮತ್ತು (ಇನ್‌ಎಬ್ರಿಯೇಷನ್) ತುಂಬಿದೆ" ಎಂದು ಅತೀವ ಖೇದ ಭಾವದಿಂದ ಹೇಳಿದಾಗ ಕಣ್ಣಲ್ಲಿ ನೀರೂರಿತು. ನಮಗೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಪಂಡಿತ ಜವಾಹರಲಾಲರ ನೇತೃತ್ವದಲ್ಲಿದ್ದ ನಮ್ಮನ್ನು ಆ ದೇಶಗಳು ಎಷ್ಟು ಸಂತೋಷದಿಂದ ಸ್ವಾಗತಿಸಿದ್ದವೋ! ಹೊಸ ಪ್ರಪಂಚವನ್ನೇ ಸೃಷ್ಟಿಸುವ ಭರಾಟೆಯಲ್ಲಿದ್ದ ನಾವು ಆಧ್ಯಾತ್ಮಿಕ ಮತ್ತು ಉಚ್ಚನೈತಿಕ ಜೀವನವನ್ನು ನಡೆಸುವ ಉತ್ಸಾಹದಲ್ಲಿ ಅವರೆಲ್ಲರ ಅಣ್ಣನೆಂಬಂತೆ ವರ್ತಿಸಿಯೂ ಇದ್ದೆವು. ಪಶ್ಚಿಮದ ನಡತೆಯನ್ನು ಹೀನಾಮಾನವಾಗಿ ಟೀಕಿಸಿಯೂ ಇದ್ದೆವು. ನಾವು ಈ ನವ್ಯ ಪ್ರಪಂಚದ ನೈತಿಕ ಮುಂದಾಳು (ಮೊರಲ್ ಲೀಡರ್) ಎಂತಲೂ ತೋರಿಸಿ ಕೊಂಡೆವು. ಸ್ಕಾಮ್ (Scam) ಭರಿತ ಜೀವನದ ನಮಗೆ ಅದೆಲ್ಲಾ ಈಗ ಭೂತಕಾಲ! ●

## LAUGH A WHILE

There are two things to aim at in life, first to get what you want; and after that to enjoy it. Only the wisest of mankind achieve the second

"Think Tank" Logan perasali Smith

***

Two men were talking about their sleeping habits and complaints " what do you do ?" asked the other. "I drink a glass of whisky every half an hour". "Does it make you sleep?" "No, but it makes me perfectly happy to stay awake".

***

An office boy went to a football match on the excuse that he had to go to his brother's funeral. The boss happened to be at the match. When he saw his office boy, he asked sarcastically, "So, this is your brother's funeral? " The office-boy thinking quickly, replied, "it looks that way, Sir, he's the referee."

***

A lawyer married a famous tennis player. Now, while she's in one court, he is in another.

Complied by **Ramprasad**

# ನಾನು ಮತ್ತು ಮೈಸೂರು ಅಸೋಸಿಯೇಶನ್

● ವೈಣಿಕ ವಿದ್ವಾನ್ ಸಿ. ಕೆ. ಶಂಕರ್‌ನಾರಾಯಣರಾವ್

ನಾನು ಮೊದಲು ಅಸೋಸಿಯೇಷನ್ನಿನಲ್ಲಿ ಕಾಲಿಟ್ಟದ್ದು 1944ನೇ ಇಸವಿ 6ನೇ ತಾರೀಖು, ಸೋಮವಾರ ರಾತ್ರಿ . ಆಗ ನನ್ನ ಪೂಜ್ಯ ಗುರುಗಳಾದ ವೀಣಾ ವಿದ್ವಾನ್ ವಿ. ಎಸ್. ಚಂದ್ರಶೇಖರಯ್ಯನವರು ಇಲ್ಲಿನ ಕೆಲವು ರಸಿಕರುಗಳ ಮನೆಗಳಲ್ಲಿ ಕಛೇರಿ ಮಾಡುವ ಸಲುವಾಗಿ ಜೊತೆಗೆ ನನ್ನನ್ನೂ ಹಾಗೂ ಮೃದಂಗ ವಿದ್ವಾನ್ ಪಾಲಘಾಟ್ ಅಯ್ಯಾಮಣಿ ಅಯ್ಯರ್‌ರವರ ತಮ್ಮ ಪಾಲಘಾಟ್ ರಾಮಯ್ಯರ್‌ರವರನ್ನು ಕರೆತಂದಿದ್ದರು. ಇಷ್ಟು ವರ್ಷಗಳ ಮೇಲೆ ಆ ತಾರೀಖು ಇಷ್ಟು ನಿಖರವಾಗಿ ಹೇಗೆ ಗೊತ್ತು ಎಂದು ಕೇಳಬಹುದು. ಆಗ ನಾನು ಬೆಂಗಳೂರು Small cause courtನಲ್ಲಿ Assistant Cash Nazir ಆಗಿ ಕೆಲಸ ಮಾಡುತ್ತಿದ್ದೆ. ಗುರುಗಳ ಜೊತೆಗೆ ಭಾನುವಾರ ಮುಂಬಯಿಗೆ ಹೋಗುವ ಸಲುವಾಗಿ ಬುಧವಾರಕ್ಕೆ ಮುಂಚೆಯೇ ಹದಿನೈದು ದಿನಗಳ ರಜೆಗೆ ಅರ್ಜಿ ಕೊಟ್ಟಿದ್ದೆ. ಜಡ್ಜ್ ಸಾಹೇಬರು ನೋಡೋಣ ಎಂದು ದಿನ ತಳ್ಳಿ ಕೊನೆಗೆ 4ನೇ ತಾರೀಖು ಶನಿವಾರ `ರಜೆ ಈಗ ಕೊಡಲಾಗುವುದಿಲ್ಲ. ಪ್ರಯಾಣ ಮುಂದುವರಿಸಿ" ಎಂದು ಹೇಳಿಬಿಟ್ಟರು. ನಾನು ಕೂಡಲೇ ನನ್ನ ವಶದಲ್ಲಿದ್ದ ಲೆಕ್ಕಪತ್ರಗಳು ಲೆಕ್ಕ ಪತ್ರಗಳು, ಪುಸ್ತಕಗಳು, Stationery ಮತ್ತು ಎಲ್ಲಾ ಕಾಗದ ಪತ್ರಗಳ ಪಟ್ಟಿಮಾಡಿ ಶಿರಸ್ತೇದಾರರಿಗೆ ಒಪ್ಪಿಸಿ ರುಜು ತೆಗೆದುಕೊಂಡು ಅಂದೇ ಜಡ್ಜ್ ಸಾಹೇಬರಿಗೆ ನನ್ನ ರಾಜೀನಾಮೆ ಕೊಟ್ಟು 5ನೇ ತಾರೀಖು ಭಾನುವಾರ ಬೆಳಗ್ಗೆ ಹೊರಟು 6ನೇ ತಾರೀಖು ಸಂಜೆ ಪೂನಾದಲ್ಲಿ Electric trainಗೆ ಬದಲಾಯಿಸಿ ರಾತ್ರಿ ಮುಂಬಯಿಯಲ್ಲಿ ಇಳಿದೆವು. ಗುರುಗಳ ಪರಿಚಯ ಪತ್ರವನ್ನು ಮುಂಬಯಿಯಲ್ಲಿ ಪ್ರಸಿದ್ಧ ಲಾಯರಾಗಿದ್ದ ಬಿ. ನಾರಾಯಣ ಸ್ವಾಮಿಯವರಿಗೆ ಅವರ ಮಾವಂದಿರಾದ ಮೈಲಾರ ಜೋಯಿಸರು ಕೊಟ್ಟಿದ್ದರು. ಅವರ ಹಾಗೂ ಆಗ ಅಸೋಸಿಯೇಷನ್ನಿನ ಕಾರ್ಯದರ್ಶಿಗಳಾಗಿದ್ದ ಬಿ. ಜಿ. ಆಚಾರ್, ಖ್ಯಾತ ಪತ್ರಕರ್ತ ಜೆ.ಎನ್. ಐಯರ್‌ರವರುಗಳು ನಮ್ಮಗಳಿಗೆ ಮೈಸೂರು ಅಸೋಸಿಯೇಷನ್ನಿನಲ್ಲಿ ವಸತಿ ಏರ್ಪಡಿಸಿದರು. ಆ ಸಮಯದಲ್ಲಿ ಅಸೋಸಿಯೇಷನ್ನಿನ ಪುಸ್ತಕ ಭಂಡಾರವನ್ನು ಆಗಿನ ಮುಂಬಯಿ ಸ್ಟೇಟಿನ ಮುಖ್ಯ ಮಂತ್ರಿಗಳಾಗಿದ್ದ ಬಿ. ಜಿ. ಖೇರ್‌ರವರಿಂದ ಉದ್ಘಾಟನೆ ಮಾಡಿಸಲಿದ್ದರು. ಆ ಸಮಾರಾಂಭಕ್ಕೆ ಪೂರ್ವ ಭಾವಿಯಾಗಿ ನಮ್ಮಿಬ್ಬರ ವೀಣಾವಾದನವನ್ನು ಏರ್ಪಡಿಸಿದ್ದರು. ಆದರಿಂದ ನಮ್ಮಗಳಿಗೆ ಮೈಸೂರು ಅಸೋಸಿಯೇಶನ್ನಿನಲ್ಲಿ ವಸತಿ ಹಾಗೂ ಊಟದ ಉಚಿತ ಏರ್ಪಾಡು ಮಾಡಿ ಸಹಾಯ ಮಾಡಿದ್ದರು. ಇದು ಅಸೋಸಿಯೇಷನ್ನಿನವರ ಕಲಾವಿದರ ಬಗ್ಗೆ ಇರುವ ವಿಶಾಲ ಮನೋಭಾವವನ್ನು ತೋರುತ್ತದೆ. ಅಂದಿನ ಸಮಾರಂಭಕ್ಕೆ ಮುಂಬಯಿಯ ಪ್ರಮುಖ ಕನ್ನಡಿಗರಾದ ಬಿ. ನಾರಾಯಣಸ್ವಾಮಿ, ಆರ್. ಡಿ. ಚಾರ್, ಬಿ. ವಿ. ಎಸ್. ಐಯಂಗಾರ್, ಬಿ. ಎಸ್. ಚೆನ್ನಸ್ವಾಮಿ ಮುಂತಾದವರೆಲ್ಲಾ ಬಂದಿದ್ದರು. ನಂತರ ಆ ಪ್ರಮುಖರ ಮನೆಗಳಲ್ಲೆಲ್ಲಾ ನಮ್ಮಗಳ ವೀಣಾವಾದನವನ್ನು ಏರ್ಪಡಿಸಿ ಗೌರವಿಸಿದ್ದರು.

ನನಗೆ ಪೂರ್ವಪರಿಚಿತರಾಗಿದ್ದ ವೀಣಾ ವಿದುಷಿ ಶ್ರೀಮತಿ ಲಲಿತಾ ವೆಂಕಟರಾಮನ್‌ರವರ ಪರಿಚಯವನ್ನು ಗುರುಗಳಿಗೆ ಮಾಡಿಸಿದೆ. ಅವರು



ಸಿ. ಕೆ. ಶಂಕರ್‌ನಾರಾಯಣರಾವ್

ಅವರ ಗುರುಗಳಾದ ವಿದ್ವಾನ್ ಕೃಷ್ಣ ಭಾಗವತರ್‌ರವರ ಪರಿಚಯ ಮಾಡಿಸಿದರು. ಅವರಿಬ್ಬರ ಮುಖಾಂತರ ಅನೇಕ ಕಛೇರಿಗಳಾದವು. ಅಸೋಸಿಯೇಷನ್‌ನ ಆತಿಥ್ಯದ ಜೊತೆಗೆ ನನ್ನ ಸಂಬಂಧಿ ಬಿ. ನರಸಿಂಹಮೂರ್ತಿಯವರ ಮಾವಂದಿರು ಪುಟ್ಟ ಶಾಸ್ತ್ರಿಗಳು, ಗುರುಗಳ ಬಾಲ್ಯ ಮಿತ್ರರಾದ ಲಕ್ಷ್ಮೀಪತಿ ಹಾಗೂ ವೀರರಾಘವನ್ (ಇವರು ಅಸೋಸಿಯೇಷನ್ ನಾಟಕಗಳಲ್ಲಿ ಭಾಗವಹಿಸಿ `ವೀರಿ' ಎಂದೇ ಪ್ರಸಿದ್ಧರಾಗಿದ್ದರು)

ಮತ್ತು ಅನೇಕ ರಸಿಕರುಗಳ ಮನೆಗಳಲ್ಲಿ ಆತಿಥ್ಯ ನಡೆದಿತ್ತು. ಅಸೋಸಿಯೇಷನ್ನಿನ ಬಾಣಸಿಗ ರಾಮಣ್ಣನವರ ಭೂರಿ ಭೋಜನವಂತೂ ನಡೆದಿತ್ತು. ಕೊನೆಯದಾಗಿ ಬಿ. ನಾರಾಯಣ ಸ್ವಾಮಿಗಳು ರೂಯಾ ಕಾಲೇಜಿನ ಆವರಣದಲ್ಲಿ ಸಾರ್ವಜನಿಕ ಕಛೇರಿಯನ್ನು ಏರ್ಪಡಿಸಿ ಗುರುಗಳಿಗೆ ಶಾಲು ಹೊದಿಸಿ ಎರಡು ಚಿನ್ನದ ಪದಕಗಳನ್ನು ಕೊಟ್ಟು ಗೌರವಿಸಿ ಕಳುಹಿಸಿಕೊಟ್ಟರು. ಹೀಗೆ ಒಂದು ತಿಂಗಳ ಕಾಲ ಅಸೋಸಿಯೇಷನ್ನಿನ ಆಶ್ರಯದಲ್ಲಿದ್ದು ಬೆಂಗಳೂರಿಗೆ ಹಿಂತಿರುಗಿದೆವು.

ನಂತರ ನಾನು ಪುನಃ ಗುರುಗಳ ಜೊತೆಗೆ ಮುಂಬಯಿಗೆ ಬಂದಿದ್ದು 1950ನೇ ಇಸವಿ ಜನವರಿ 3ನೇ ತಾರೀಖು ಬಿ. ವಿ. ಅಯಂಗಾರ್‌ರವರ ಅಣ್ಣ ಬಿ. ವಿ. ಕೃಷ್ಣ ಅಯಂಗಾರ್‌ರವರ ಪುತ್ರ ಶ್ರೀ ಮೂರ್ತಿಯವರ ಮನೆಯಲ್ಲಿ, ಪೂನದಲ್ಲಿ ನಾಲ್ಕು ದಿನವಿದ್ದು ಮುಂಬಯಿಗೆ 3ನೇ ತಾರೀಖು ಬಂದವರೇ ಬಾಂಬೆ ಸೆಂಟ್ರಲ್ ಸ್ಟೇಷನ್ ಬಳಿ ಇದ್ದ ಬಿ. ವಿ. ಕೆ. ಐಯಂಗಾರ್‌ರವರ ಮನೆಯಲ್ಲಿ ವಾರ ಕಾಲವಿದ್ದು ಮಾಟುಂಗಕ್ಕೆ ಹಿಂತಿರುಗಿದೆವು. ಆ ನಂತರ ನಾವು ಗುರುಗಳ ಆಪ್ತ ಸ್ನೇಹಿತರು ಆರ್. ವೆಂಕಟರಾಮಯ್ಯನವರ ಮನೆಯಲ್ಲಿ ಮೊಕ್ಕಾಂ ಮಾಡಿದ್ದೆವು. ಅವರ ಸಂಸಾರ ಮೈಸೂರಿನಲ್ಲಿದ್ದುದರಿಂದ ಒಬ್ಬರೇ ಇದ್ದರು. ಅದು ಆಗಿನ ಜಂಪಡಾಬಾದ್ ಗ್ರೌಂಡ್ ಫ್ಲೋರ್‌ನಲ್ಲಿ. ಆಗ ಮೈಸೂರು ಅಸೋಸಿಯೇಷನ್ನಿಗೆ ಎನ್. ಡಿ. ರಾವ್‌ರವರು ಕಾರ್ಯದರ್ಶಿಗಳಾಗಿದ್ದರು. ಗುರುಗಳ ಮಗಳ ಮದುವೆಗಾಗಿ ಹಣ ಒದಗಿಸುವ ಸಲುವಾಗಿ ಇಲ್ಲಿಗೆ ಬಂದಿದ್ದರು. ಆಗ ನಮ್ಮ ಜೊತೆಗೆ ಮೃದಂಗ ವಿದ್ವಾನ್ ಎಚ್. ಪುಟ್ಟಾಚಾರ್‌ರವರು ಬಂದಿದ್ದರು. ಮೊದಲು ಕಛೇರಿ ಅಸೋಸಿಯೇಷನ್ನಿನಲ್ಲೇ ಆಯಿತು. ಅಂದು ಮುಂಬಯಿಯ ಕನ್ನಡ ರಸಿಕರೆಲ್ಲಾ ಬಂದಿದ್ದರು. ಗುರುಗಳ ಪ್ರವಾಸದ ವಿಷಯ ತಿಳಿದ ಆ ರಸಿಕರೆಲ್ಲರೂ ತಮ್ಮ ಮನೆಗಳಲ್ಲೇ ವೀಣಾವಾದನವನ್ನು ಏರ್ಪಡಿಸಿ ಮುಕ್ತ ಹಸ್ತಗಳಿಂದ ಸಹಾಯ ಮಾಡಿದರು. ಈ ಏರ್ಪಾಡುಗಳನ್ನೆಲ್ಲಾ ಬಿ. ನಾರಾಯಣಸ್ವಾಮಿ, ಆರ್. ವೆಂಕಟೇಶ ಮೂರ್ತಿ, ಬಿ. ವಿ. ಎಸ್. ಐಯಂಗಾರ್, ಬಿ. ಎಸ್. ಚೆನ್ನಸ್ವಾಮಿ, ಆರ್. ಡಿ. ಚಾರ್, ಎನ್. ಎನ್. ಐಯಂಗಾರ್‌ರವರುಗಳು ಮುಂದೆ ನಿಂತು ಮಾಡಿದ್ದರು. ಇದಲ್ಲದೆ ಹಿಂದೆಯೇ ಪರಿಚಿತರಾಗಿದ್ದ ಲಲಿತಾ ವೆಂಕಟರಾಮನ್, ಸುಂದರಮ್ಮ ರಾಘವಯ್ಯ ಅವರ ಗುರುಗಳಾದ ಕೃಷ್ಣಭಾಗವತರ್‌ರವರುಗಳೂ ಸಹಾ ಅನೇಕ ಕಛೇರಿಗಳನ್ನು ಏರ್ಪಡಿಸಿದರು. ನಂತರ ಅಹಮದಾಬಾದಿನಲ್ಲಿ ನೆಲೆಸಿದ್ದ ಡಾಕ್ಟರ್ ಎಂಜಿ ಡಿ. ಗಾವಿಯವರು ಆಹ್ವಾನಿಸಿ ಅಲ್ಲಿನ ಹಿಂದೂಸ್ಥಾನಿ

ಸಂಗೀತ ಮಂಡಳಿಯಲ್ಲಲ್ಲದೆ ಮೂರಿ ಕಡೆ ಕಛೇರಿಗಳನ್ನು ಏರ್ಪಡಿಸಿದರು. ಹಾಗೂ `ಸಾನಂದ್' Stateನ ಮಹಾರಾಜರ ಅರಮನೆಯಲ್ಲಿ ಸಹ ನಮ್ಮಗಳ ಕಛೇರಿಯಾಯಿತು. ಭಾರತಿ ವಿದ್ಯಾಭವನದಲ್ಲಿ ಶ್ರೀಮತಿ ಲೀಲಾವತಿ ಮುನ್ಶಿಯವರು ಏರ್ಪಡಿಸಿದ್ದ ಕಛೇರಿಗಾಗಿ ಮುಂಬಯಿಗೆ ಬಂದು ಆದಾದ ನಂತರ ಪುನಃ ಅಹಮದಾಬಾದಿಗೆ ಹಿಂತಿರುಗಿ ಇನ್ನೆರಡು ಕಛೇರಿಗಳನ್ನು ಮಾಡಿ ಅಜ್ಮೀರಿಗೆ ಗುರುಗಳ ಶಿಷ್ಯೆಯವರ ಆಹ್ವಾನದ ಮೇಲೆ ಹೋಗಿ ಅಲ್ಲೂ ಮೂರು ಕಛೇರಿಗಳನ್ನು ಮಾಡಿದೆವು. ಈ ಮಧ್ಯೆ ಆರ್. ವಿ. ಮೂರ್ತಿಯವರು ದೆಹಲಿಯಲ್ಲಿ ಭಾರತ ಸರ್ಕಾರದ Press Information Officer ಆಗಿದ್ದ ಐಸ್. ಆರ್. ಎಸ್. ರಾಘವನ್‌ರವರಿಗೆ ಕಾಗದ ಬರೆದ ಅವರಿಂದಲೂ ಆಹ್ವಾನ ತರಿಸಿದ್ದರು. ಅಜ್ಮೀರಿನಿಂದ ನಾವುಗಳು ದೆಹಲಿಗೆ ಮಾರ್ಚ್ ಕೊನೇ ವಾರದಲ್ಲಿ ತಲುಪಿ ರಾಘವನ್‌ರವರ ಮನೆಯಲ್ಲೇ ಮೊಕ್ಕಾಂ ಮಾಡಿದೆವು. ಅಲ್ಲಿ ಕರ್ನಾಟಕ ಸಂಘವಲ್ಲದೆ ಇನ್ನೂ ಮೂರು ಕಡೆ ಕಛೇರಿಗಳಾದವು. ಅಲ್ಲದೆ ದೆಹಲಿ ಆಕಾಶವಾಣಿ ಕೇಂದ್ರದಿಂದ ನಮ್ಮ ವೀಣಾವಾದನದ ಪ್ರಸಾರವಾಯಿತು. (ಮುಂಬಯಿ ಮತ್ತು ಅಹಮದಾಬಾದಿನಲ್ಲಿ ಸಹ ನಮ್ಮ ವೀಣಾವಾದನ ಪ್ರಸಾರವಾಗಿತ್ತು.) ಏಪ್ರಿಲ್ ಹದಿಮೂರನೇ ತಾರೀಖು, ಆಗಿನ Speaker ಆಗಿದ್ದ ಅನಂತಶಯನಮ್ ಅಯಂಗಾರ್ಯರು ತಮಿಳು ಯುಗಾದಿಯ ಸಂದರ್ಭದಲ್ಲಿ ಲೋಕ ಸಭಾ ಸದಸ್ಯರ ಹಾಗೂ ದೆಹಲಿ ರಸಿಕರ ಸಮ್ಮುಖದಲ್ಲಿ ಏರ್ಪಡಿಸಿದ್ದ open Air Get Together ನಲ್ಲಿ ಮೂರು ಗಂಟೆಗಳ ಕಾಲ ನಮ್ಮ ವೀಣಾ ವಾದನವಾಯಿತು. ನಂತರ ನಾವುಗಳು 20ನೇ ತಾರೀಖು ಹೊರಟು ಮುಂಬಯಿಗೆ ಹಿಂತಿರುಗಿದೆವು. 22ನೇ ತಾರೀಖು Reserve Bankನ ಆವರಣದಲ್ಲಿ ಆಗಿನ Deptuy Governor ಆಗಿದ್ದ ಎಂ. ಜಿ. ಮೇಖರಿಯವರು ಏರ್ಪಡಿಸಿದ್ದ ಕಡೆಯ ವೀಣಾ ವಾದನವನ್ನು ಮಾಡಿದೆವು. ಮುಂಬಯಿನ ನಿವಾಸಿಗಳ ಆಣತಿಯ ಮೇರೆಗೆ ನನ್ನನ್ನು ಶೇಷಣ್ಣನವರ ಪರಂಪರೆಯನ್ನು ಮುಂದುವರೆಸೆಂದು ಹೇಳಿ ಇಲ್ಲಿಯೇ ಬಿಟ್ಟು 23ನೇ ತಾರೀಖು ನನ್ನ ಗುರುಗಳು ಬೆಂಗಳೂರಿಗೆ ಹಿಂತಿರುಗಿದರು. ಅಂದಿನಿಂದಲೇ ನನ್ನ ಮತ್ತು ಮೈಸೂರು ಅಸೋಸಿಯೇಷನ್ನಿನ ಸಂಬಂಧ ನಿಕಟವಾಯಿತು. ಅಂದಿನಿಂದ ವೀಣಾ ಶಿಕ್ಷಕನಾಗಿ ಮುಂಬಯಿ ವಾಸಿಯಾಗಿ ನಿಂತಿದ್ದೇನೆ.

ನನ್ನ ಮೊದಲ ಪಾಠಗಳು ಶ್ಯಾಮಲ ಬಂಗಲೆಯಲ್ಲಿದ್ದ ನನ್ನ ಸಂಬಂಧಿ ಪಿ.ಎಸ್. ರಾವ್‌ರವರ ಮಗಳು ಶೈಲ ಕುಮಾರಿ ಹಾಗು ಅದೇ ಬಂಗಲೆಯ ಬಿ. ನಾರಾಯಣ ಸ್ವಾಮಿಯವರ ಮಗಳು ಮಹಾಲಕ್ಷ್ಮಿಗೆ ಬಾಯಿ ಹಾಡುಗಾರಿಕೆಯಿಂದ ಪ್ರಾರಂಭವಾದವು. ನನ್ನ ಮೊದಲ ವೀಣೆ ಪಾಠ ಲಲಿತಾ ವೆಂಕಟರಾಮನ್‌ರವರ ಮಗಳು ರಾಜಲಕ್ಷ್ಮಿಯಿಂದ ಪ್ರಾರಂಭವಾಯಿತು. 50ನೇ ಇಸವಿ ಮೇ ತಿಂಗಳು ಪೂರಾ ವೆಂಕಟರಾಮಯ್ಯನವರ ಮನೆಯಲ್ಲೇ ಕಳೆದೆ. ಜೂನ್ ತಿಂಗಳಿಂದ ಆರ್. ವಿ. ಮೂರ್ತಿಯವರು ನನಗೆ ಕನ್ನಡ ಶಾಲೆಯ ಪ್ರಾಂಶುಪಾಲರಿಗಾಗಿ ಕಾದಿರಿಸಿದ್ದ B.I.T. Buildingನ Flatನಲ್ಲಿ ಇತರ ಯುವಕರೊಂದಿಗೆ ಇರಲು ಅವಕಾಶ ಮಾಡಿಕೊಟ್ಟರು. ಅಲ್ಲಿ ನಮ್ಮ ಜೊತೆ ಮೂರ್ತಿಯವರ ಸೋದರಳಿಯ ಜಿ. ಸುಬ್ಬಣ್ಣ, ಭಾವಮೈದ ಶ್ರೀನಿವಾಸರಾವ್ (ಚಿನ್ನು). ಖ್ಯಾತನಾಳ್ ಹಾಗೂ ಸುಬ್ರಮಣ್ಯಂರವರುಗಳಿದ್ದರು. ಕೆಲವೇ ದಿವಸಗಳಲ್ಲಿ ಸುಬ್ರಮಣ್ಯಂ ಎಂಬುವವರ ಪರೀಕ್ಷೆಯಲ್ಲಿ ಸರಿಯಾದ ರೀತಿಯಲ್ಲಿ ತೇರ್ಗಡೆಯಾಗಲಿಲ್ಲವೆಂದು ನೇಣು ಹಾಕಿಕೊಂಡರು. ಆಗ ಕೆಲವು ದಿನ, ಎನ್. ಡಿ. ರಾವ್‌ರವರು ನನ್ನನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು. ಅವರ ಮನೆಯಲ್ಲೇ ಶ್ರೀ ಗುಂಡಣ್ಣನವರ ನಿಕಟ ಪರಿಚಯವಾಯಿತು. ನಂತರ ಪುನಃ B.I.T.ಗೆ ಹಿಂತಿರುಗಿದಾಗ ಶ್ರೀ K.V. ಸುಬ್ರಮಣ್ಯಶಾಸ್ತ್ರಿ, ವಿಜಯಯೇಂದ್ರರಾವ್ ಗುರುರಾಜರಾವ್, ಕೆ.ವಿ. ಶೇಷಾದ್ರಿರವರುಗಳು ಸಹಾ Room mats ಆಗಿದ್ದರು. ಅಲ್ಲಿದ್ದಾಗ ನಾನು ಅಸೋಸಿಯೇಷನ್ ಮೆಸ್‌ನಲ್ಲೇ ಊಟಕ್ಕೆ ಹೋಗುತ್ತಿದ್ದೆ. ಅಸೋಸಿಯೇಷನ್ನಿನಲ್ಲಿ ನನ್ನ ಸಹಪಾಠಿ ಟಿ. ಆರ್. ಎಸ್. ಆನಂದಂ ಅಲ್ಲದೆ ಇನ್ನೂ ಅನೇಕ ಸ್ನೇಹಿತರಿದ್ದರು. ಅವರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್‌ನಲ್ಲಿ ಸಹಪಾಠಿಯಾಗಿದ್ದ ಶ್ರೀ ಸಿ. ಕೆ. ಕೃಷ್ಣಮೂರ್ತಿ ಹಾಗೂ ಬೆಂಗಳೂರಿನಲ್ಲೇ ಖ್ಯಾತ ನೃತ್ಯಪಟು ರಾಮಗೋಪಾಲ್‌ರವರ ಮನೆಯಲ್ಲಿ ಪರಿಚಿತರಾಗಿದ್ದ ವಿ. ಕೆ. ಮೂರ್ತಿಯವರುಗಳು ಮುಖ್ಯ ಪರಿಚಿತರು.

ವಿ. ಕೆ. ಮೂರ್ತಿ (ಕುಟ್ಟಿ) ಆಗ ಅಸೋಸಿಯೇಷನ್ನಿನ ನಾಟಕ ವಿಭಾಗದಲ್ಲಿ ಪ್ರಧಾನ ಭಾಗವಹಿಸುತ್ತಿದ್ದರು. ನನಗೆ ಕುಟ್ಟಿಯೇ ಲಕ್ಷ್ಮೀರಮಣ, ಪುಟ್ಟಣ್ಣಯ್ಯ, ರಾಮರಾವ್, ಸುಬ್ಬರಾವ್ ಅವರುಗಳ ಪರಿಚಯ ಮಾಡಿಸಿದರು. 50ನೇ ಇಸವಿ ಆಗಸ್ಟ್ 15ನೇ ತಾರೀಖು ಎಂದಿನಂತೆ ಅಸೋಸಿಯೇಶನ್ನಿನವರು ಸ್ವಾತಂತ್ರ ದಿನಾಚರಣೆ.ನ್ನು ಮಾಡಿದರು. ಅಂದು ನಾನೇ ನಿರ್ದೇಶಿಸಿದ ಸೌಭಾಗ್ಯ ಕಿರುನಾಟಕದಲ್ಲಿ ಲಕ್ಷ್ಮೀರಮಣ ಸುಬ್ಬಲಕ್ಷ್ಮಿಯಾಗಿಯೂ, ರಾಮು ಸುಬ್ಬಕೃಷ್ಣನಾಗಿಯೂ, ಪುಟ್ಟಣ್ಣಯ್ಯ ಸಂಗ್ರಾಮಯ್ಯನಾಗಿಯೂ ಪಾತ್ರವಹಿಸಿದ್ದರು. ನಾನು ಶ್ರೀಮಂತ ಸುಬ್ಬನರಸಿಂಹಯ್ಯನ ಪಾತ್ರವಹಿಸಿದ್ದೆ. ನಾಟಕ ಬಹಳ ಚೆನ್ನಾಗಿ ಕಳೆಗೊಂಡಿತು. ಇವರು ಯಾರು ಹೊಸಬರು ಎಂದು ಕೇಳಲು, ನನ್ನ ಪರಿಚಯಸ್ಥರು ಇವರು ವೀಣೆ ಮೇಷ್ಟ್ರು, ಹೊಸದಾಗಿ ಬಂದು ಇಲ್ಲಿ ನೆಲೆಸಿದ್ದಾರೆ ಎಂದು ಪರಿಚಯಿಸಿದರು. ಹೀಗೆ ನಾನು ವೀಣೆ ಮೇಷ್ಟರಾಗಿ ಪ್ರಚಾರ ಸಿಕ್ಕಿ ತಳವೂರಲು ಅನುವಾಯಿತು. 50ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಅಧಿವೇಶನದ ಮುಂಬಯಿನ ಕವಾಸ್‌ಜಿ ಜಹಂಗೀರ್ ಹಾಲ್‌ನಲ್ಲಿ ಆಯಿತು. ಇಲ್ಲಿ ಅದನ್ನು ನಡೆಸುವ ಜವಾಬ್ದಾರಿಯನ್ನು ವರದರಾಜ ಆದ್ಯರವರು ವಿಶೇಷ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ನಿಭಾಯಿಸಿದರು. ಅದಕ್ಕಾಗಿ ಅನೇಕ ಗೋಷ್ಠಿಗಳ ಉಪಸಮಿತಿಗಳನ್ನು ಮಾಡಿದ್ದರು. ನಾನು ಗಮಕ ಗೋಷ್ಠಿಗೆ ಕಾರ್ಯದರ್ಶಿಯಾಗಿ ಕೆಲಸ ಮಾಡಿದೆ. ಬಿ.ಡಿ. ಬೆಳವಿಯವರು ಆ ಗೋಷ್ಠಿಗೆ ಅಧ್ಯಕ್ಷರಾಗಿದ್ದರು. ಖ್ಯಾತ ಗಮಕ ಕಲಾಧುರಂಧರ ಸಂ. ಗೋ. ಬಿಂದೂರಾಯರು ಮುಖ್ಯ ಅತಿಥಿಯಾಗಿ ಬಂದಿದ್ದರು. ಅದೇ ಸಂದರ್ಭದಲ್ಲಿ ಅಸೋಸಿಯೇಷನ್ನಿನ ಪತಿಯಿಂದ ಪುಟ್ಟಣ್ಣಯ್ಯನವರು ಬರೆದ `ಭಂಡ್ವಾಳು' ನಾಟಕವನ್ನು ಪ್ರದರ್ಶಿಸಿದೆವು. ಆಗೆಲ್ಲಾ ನಾನು B.I.T. Building ನಲ್ಲೇ ಇದ್ದು ಅಸೋಸಿಯೇಷನ್ನಿನ ಬೇರೆ ಬೇರೆ ನಾಟಕಗಳಿಗೆ Rehearsalಗಾಗಿ ಹೋಗುತ್ತಿದ್ದೆ. ಈ ಮಧ್ಯೆ ಗೊತ್ತಾಗಿದ್ದ ಬೇರೆ ವೀಣೆ ಪಾಠಗಳಿಗೆ ಹೋಗುವ ಸಮಯ ಬಿಟ್ಟು ವಿಕ್ಕೆಲ್ಲಾ ಸಮಯವನ್ನೂ ಅಸೋಸಿಯೇಷನ್ನಿನ Lawnನಲ್ಲಾಗಲೀ, Rehearsal ಕೋಣೆಯಲ್ಲಾಗಲೀ ಕಳೆಯುತ್ತಿದ್ದೆ. ನಾಟಕ ವಿಭಾಗದಿಂದ ನಾವುಗಳು ಕೈಲಾಸಂರವರ ಹೋಂರೂಲು, ಬಂಡ್ವಾಳ್ವಿಲ್ಲದ್ಬಡಾಯಿ, ಹುತ್ತದಲ್ಲಿ ಹುತ್ತ, ನೆರೆಹೊರ್ಕೆ ನೆರೆ ಹೊರ್ಕೆನೇವೇಯೆ? ಟೊಳ್ಳುಗಟ್ಟಿ, ಪರ್ವತವಾಣಿಯವರ ಮೀನಾಮದುವೆ, ಬಹದ್ದೂರ್ ಗಂಡ, ಉಂಡಾಡಿ ಗುಂಡ, ಬಣ್ಣದ ಬೊಂಬೆ (ಈ ನಾಟಕವನ್ನು ಅಸೋಸಿಯೇಷನ್ನಿನ ರಜತ ಮಹೋತ್ಸವದ ಸಂದರ್ಭದಲ್ಲಿ ಆಡಿದೆವು.) ಸಿ. ಎಸ್. ಪುಟ್ಟಣ್ಣಯ್ಯನವರ ವಕ್ರಮೂರ್ತಿ, ಬಲಿದಾನ ಹಾಗೂ ಕಾರಂತರ ಸುಧಾರಿತ ಸುಭದ್ರ ನಾಟಕಗಳನ್ನು ಅಲ್ಲದೆ ಧರ್ಮರತ್ನಾಕರ ಮುಂತಾದ ಅನೇಕ ನಾಟಕಗಳನ್ನು ಅಸೋಸಿಯೇಷನ್ನಿನಲ್ಲಲ್ಲದೇ ಬೇರೆ ಬೇರೆ ಕಡೆಗಳಲ್ಲಿ ಅಸೋಸಿಯೇಷನ್ನಿನ ಪರವಾಗಿ ಪ್ರದರ್ಶಿಸಿದೆವು. ಆಗ ನಮ್ಮ ತಂಡದಲ್ಲಿ ಕುಟ್ಟಿ, ಪುಟ್ಟಣ್ಣಯ್ಯ, ನಾನು ಸುಬ್ಬರಾವ್, ಲಕ್ಷ್ಮೀರಮಣ್, ರಾಮು, ಭೀಮರಾವ್ ದುಗ್ಗಪ್ಪಯ್ಯ, ಕುಂತಿದುಗ್ಗಪ್ಪಯ್ಯ, ಟಿ. ಆರ್. ಎಸ್. ಆನಂದಂ, ಬಿ. ಜಿ. ಆಚಾರ್, ಶ್ರೀನಿವಾಸರಾವ್ (ಬೆಂಡು), ರಾಮಚಂದ್ರರಾವ್, ಮಧುರಾಕೃಷ್ಣಸ್ವಾಮಿ, ಬಿ. ನಾರಾಯಣಸ್ವಾಮಿ ಲಕ್ಷ್ಮೀಕೃಷ್ಣಸ್ವಾಮಿ

ಮುಂತಾದವರೆಲ್ಲಾ ಭಾಗವಹಿಸುತ್ತಿದ್ದರು. ಮಹಿಳಾ ವಿಭಾಗದ ಶ್ರೀಮತಿಯರಾದ ಜಯಮ್ಮ ಸಿ. ಕೆ. ಎಸ್. ರಾವ್, ಸೀತಮ್ಮ S.R. ರಾವ್ ಸುಮಿತ್ರ P.S. ರಾವ್ ಒಳಗೊಂಡು ಮಹಿಳೆಯರದೇ ತಂಡ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ವೀಣಾ ಮದುವೆಯಲ್ಲಿ ಬಿ. ನಾರಾಯಣಸ್ವಾಮಿಯವರೊಂದಿಗೆ ಅವರ ಧರ್ಮಪತ್ನಿ ಶ್ರೀಮತಿ ಶಾರದಮ್ಮನವರೂ ಪಾತ್ರವ ವಹಿಸಿದ್ದ ನೆನಪು. ಆ ನಾಟಕದಲ್ಲಿ ನಾನು ಜೋಯಿಸರ ಪಾತ್ರ ವಹಿಸಿದ್ದೆ.

53-54ನೇ ಇಸವಿಯಲ್ಲಿ ಮಹಿಳಾ ವಿಭಾಗಕ್ಕೋಸ್ಕರವಾಗಿ ನಾನು ದೇವರನಾಮಗಳನ್ನು ಹೇಳಿಕೊಟ್ಟು ಅನೇಕರಿಗೆ ಮಹಿಳೆಯರನ್ನು ತಯಾರು ಮಾಡಿದ್ದೇನೆ.

### ಏಳು ಮನೆ ಚೇಲಿ

ನನಗೆ ಎಲ್ಲದಕ್ಕಿಂತಲೂ ಮುಖ್ಯವಾಗಿ ಬೇಕಾಗಿದ್ದುದು ಹೆಂಡತಿ ಮಕ್ಕಳನ್ನು ಕರೆಸಿಕೊಂಡು ಸಂಸಾರ ಮಾಡಲು ವಸತಿ ಮುಂಬಯಿನಲ್ಲಿ ಅದರದೇ ದೊಡ್ಡ ಅಡ್ಡಿ. ಆದರೆ ನನ್ನ ಹಿತೈಷಿಗಳಿಂದ ಆಗಾಗ್ಗೆ ಹೆಂಡತಿ ಮಕ್ಕಳನ್ನು ಸ್ವಲ್ಪ ಕಾಲವಾದರೂ ಕರೆಸಿಕೊಳ್ಳಲು ಅನುವಾಗುತ್ತಿದ್ದರು. 1951ನೇ ಇಸವಿ ಮೇ ತಿಂಗಳಲ್ಲಿ ಬಿ. ನಾರಾಯಣ ಸ್ವಾಮಿಯವರ ಸೋದರಳಿಯ ಸತ್ಯನಾರಾಯಣ ರಾಯರು ರಜೆಗೆ ಬೆಂಗಳೂರಿಗೆ ಹೋದಾಗ ವಡಾಲಾದಲ್ಲಿನ ಅವರ Govt. Quarterನಲ್ಲಿ ಒಂದೂವರೆ ತಿಂಗಳು ನಮಗೆ ಇರಲು ಬಿಟ್ಟು ಕೊಟ್ಟಿದ್ದರು. ನಂತರ 51ರ ಅಕ್ಟೋಬರ್ ತಿಂಗಳಿನಿಂದ ಏಳು ತಿಂಗಳು ಕಾಲ ಘಾಟಕೋಪರಿನಲ್ಲಿ ಒಂದು ಚಾಲ್‌ನಲ್ಲಿ ವಾಸಿಸಲು ಬಾಡಿಗೆ ಕೊಟ್ಟಿದ್ದರು. ಆಗ ನಮ್ಮ ಸಂಗಡ ನನ್ನ ಆಪ್ತ ಸ್ನೇಹಿತರಾದ ಕೆ. ವಿ. ಎಸ್. ಶಾಸ್ತ್ರಿಗಳು ಅವರ ಪತ್ನಿ ಸಮೇತ ಅದೇ ಚಾಲಿನಲ್ಲಿ ಏಳ ತಿಂಗಳ ಕಾಲ ಇದ್ದರು. ಹೆಂಡತಿಯ ಬಾಣಂತಿನ ಮುಗಿಸಿಕೊಂಡು ಬಂದಾಗ ಆ ಮನೆ ಬಿಡಬೇಕಾಗಿ ಬಂತು. ಆ ಸಮಯದಲ್ಲಿ ಶ್ರೀ ಎಸ್. ಆರ್. ರಾವ್‌ರವರು ಅವರ ಸಹೋದ್ಯೋಗಿ ಶ್ರೀ ಎಂ. ಎಸ್. ಎಸ್. ರಾವ್‌ರವರ ಮನೆಯಲ್ಲಿ ಒಂದು ತಿಂಗಳು ಅವರ ಗೈರು ಹಾಜರಿಯಲ್ಲಿರಲು ಏರ್ಪಾಡು ಮಾಡಿಕೊಟ್ಟರು. ಆಗ ನನ್ನ ಸಂಗಡ ನನ್ನ ಮಾತಾಪಿತೃಗಳೂ ಸಹ ಇದ್ದರು. ಎಂ. ಎಸ್. ಎಸ್. ರಾವ್‌ರವರು ಹಿಂತಿರುಗಿದ ಕೂಡಲೇ ಮನೆಯವರನ್ನು ತಂದೆ ತಾಯಿಯರನ್ನೊಳಗೊಂಡು ಊರಿಗೆ ರವಾನಿಸಿ ಪುನರಾಯಾನ್ ಮಹಾಕಪಿ' ಅಂತ B.I.T. Buildingಗೆ ಹಿಂತಿರುಗಿದೆ. ಘಾಟ್‌ಕೋಪರ್ ಮನೆಯ ಏಳು ತಿಂಗಳ ವಾಸದಲ್ಲಿ ಸಾಕಷ್ಟು ಸಾಮಾನು ಜಮಾ ಆಗಿತ್ತು, ಕೆಲವು Wooden Rack ಆಗ B.I.T. ಯಲ್ಲಿರಲು ಒಂಟಿಯಾಗಿ ಬಂದಿದ್ದ N.K.E.S. ಹೊಸ ಪ್ರಾಂಶುಪಾಲರು ನರಸಿಂಹಯ್ಯನವರಿಗೆ ಕೊಟ್ಟು ಮಿಕ್ಕ ಸಾಮಾನುಗಳನ್ನು ನನ್ನ ಶಿಷ್ಯೆ ಶ್ರೀಮತಿ ಮಾಲತಿಯವರ ತಂದೆ ಕೆ. ಆರ್. ಗೋಪಾಲ ಅಯಂಗಾರ್‍ಯರ ಮನೆಯ ಅಟ್ಟದಲ್ಲಿ ಹಾಕಿರಬೇಕಾಯಿತು. ನರಸಿಂಹಯ್ಯನವರ ಜೊತೆಗೆ ನನ್ನ ಹಳೆಯ ಮಿತ್ರ ನಾಡಿಗೇರ್ ಗೋವಿಂದ ರಾವ್ ಸಹಾ ಬಂದು B.I.T.ಯಲ್ಲಿ ಇದ್ದರು. ಅವರೂ ಅವರ ಶ್ರೀಮತಿ ಸುಲೋಚನಾ ಹಾಗೂ ಮೂರು ವರ್ಷದ ಮಗಳು ರೇಖಾ ಸಹಾ ಅಲ್ಲೇ ಇದ್ದರು. ನರಸಿಂಹಯ್ಯನವರ ಸಂಸಾರ ಬರುತ್ತಲೂ ಗೋವಿಂದರಾವ್ ಮುಲುಂಡ್ ಮನೆಗೆ ಹೋದರು. ನಾನು ನನ್ನ ಇನ್ನೊಬ್ಬ ಶಿಷ್ಯೆಯ ತಂದೆ ಡಾಕ್ಟರ್ ವೈದ್ಯನಾಥ್‌ನ್‌ರವರ ಮನೆಗೆ ಅವರು ಕೊಟ್ಟ ಒಂದು ರೂಮಿನಲ್ಲಿರಲು ಹೋದೆ. ಅಲ್ಲಿ ಹೋದವನು ನನ್ನ ಶ್ರೀಮತಿ ಹಾಗೂ ಮಕ್ಕಳು ಸುಬ್ಬಣ್ಣ ಹಾಗೂ ದಿನೇಶ್ ಇವರುಗಳನ್ನು ಕರೆಸಿಕೊಂಡೆ. ಅಲ್ಲಿಗೆ ಮೈಸೂರು ಅಸೋಸಿಯೇಷನ್ನಿನಿಂದ ಊಟ ತರಿಸಿಕೊಳ್ಳುತ್ತಿದ್ದೆ. ಬೆಳಗಿನ ಉಪಹಾರ, ಕಾಫಿ, ಮಧ್ಯಾಹ್ನದ ಕಾಫಿ ಡಾಕ್ಟರ ಮಾಮಿ ಒದಗಿಸುತ್ತಿದ್ದರು. ಡಾಕ್ಟರ್ ಮನೆಯಿಂದ ನಾವು ಬಿಡಬೇಕಾಗಿ ಬಂದಾಗ ಶ್ರೀಮತಿ ಸೀತಮ್ಮ S. R. ರಾವ್‌ರವರು ತಾವಿದ್ದ ದೌಲತ್ ವಿಲ್ಲಾದ ಮನೆಯಲ್ಲಿ ಒಂದು ಕೋಣೆಯನ್ನು ಬಿಟ್ಟುಕೊಟ್ಟು ನಾವಿರಲು ಅನುವು ಮಾಡಿಕೊಟ್ಟರು. ಅಲ್ಲೂ ಸಹ ಮೈಸೂರು ಅಸೋಸಿಯೇಷನ್ನಿನಿಂದ ಊಟ ತರಿಸುತ್ತಿದ್ದೆ. ಯಥಾ ಪ್ರಕಾರ ಬೆಳಗಿನ ಉಪಹಾರ, ಕಾಫಿ, ಮಧ್ಯಾಹ್ನದ ಕಾಫಿ, ಸೀತಮ್ಮನವರೇ ಒದಗಿಸುತ್ತಿದ್ದರು. ಈ ಎರಡು ಕಡೆಗಳಲ್ಲೂ ಬಾಡಿಗೆಯಿಲ್ಲದೆ ಉಪಚಾರದ ಸಮೇತ ನನಗೆ ವೀಣೆ ಪಾಠದ ಫೀಸನ್ನೂ ತಪ್ಪದೆ ಕೊಡುತ್ತಿದ್ದರು. ಈ ಸಹಾಯವನ್ನು ಮರೆಯಲು ಸಾಧ್ಯವೇ?

1953ನೇ ಏಪ್ರಲ್ ತಿಂಗಳಲ್ಲಿ ನಾನೊಬ್ಬನೇ ಊರಿಗೆ ಹೋದಾಗ ನನ್ನ ಶ್ರೀಮತಿ ಜಂಕ್ಷಡಾಬಾದ್‌ನ ಮೊದಲ ಮಹಡಿಯಲ್ಲಿದ್ದ ಶ್ರೀಮತಿ ಕೃಷ್ಣಬಾಯಿಯವರ ಮನೆಯಲ್ಲಿ ಪೇಯಿಂಗ್‌ಗೆಸ್ಟ್ ಆಗಿ ಇರುವಂತೆ ಏರ್ಪಾಟು ಮಾಡಿಕೊಂಡಿದ್ದಳು. ಅಲ್ಲಿಗೆ ಗೋಪಾಲ ಅಯಂಗಾರ್‍ಯರ ಮನೆಯಿಂದ ನಾವಿಟ್ಟಿದ್ದ ಸಾಮಾನುಗಳನ್ನು ತರಿಸಿಕೊಂಡೆವು. ಅಲ್ಲಿಗೂ ಸಹಾ ಮೈಸೂರು ಅಸೋಸಿಯೇಷನ್ನಿನಿಂದ ಎರಡು ಹೊತ್ತು ರಾಮಣ್ಣನವರ ರಸಕವಳ ತರಿಸಿಕೊಳ್ಳುತ್ತಿದ್ದೆವು. ಇಲ್ಲಿದ್ದಾಗಲೇ ನಾನು ಕನ್ನಡ ಸಂಘದಲ್ಲಿ ಮೈಸೂರು ಸಂಗೀತ ಪಾಠ ಶಾಲೆ'ಯನ್ನು ತೆಗೆದು 8-10ಮಕ್ಕಳಿಗೆ ಬಾಯಿಪಾಠ ಹೇಳುತ್ತಿದ್ದೆ. ನನ್ನ ಶ್ರೀಮತಿ 1954ಇಸವಿ ಮಾರ್ಚಿ ತಿಂಗಳಲ್ಲಿ ಬಾಣಂತಿತನಕ್ಕೆ ಚಿಕ್ಕಮಗಳೂರಿಗೆ ಮಕ್ಕಳ ಸಮೇತ ಹೋದಳು. ಆಗ ನಾನು ಕುರ್ಲಾದಲ್ಲಿ ಚಾಲ್‌ನಲ್ಲಿ ವಾಸಿಸುತ್ತಿದ್ದ ಎನ್. ಕೃಷ್ಣಯಿಯಂಗಾರ್‌ರವರ ಪತ್ನಿಗೆ ವೀಣೆ ಪಾಠ ಹೇಳುತ್ತಿದ್ದೆ. ಅವರು ಅದೇ ಸಮಯದಲ್ಲಿ ಚೆಂಬೂರು ಸ್ಟೇಷನ್ ಬಳಿ ಇದ್ದ ದೊಡ್ಡ Self Contained Flatಗೆ ಬದಲಾಯಿಸಿದವರು ಕುರ್ಲಾ ಮನೆಯನ್ನು ನನಗೆ ಕೊಟ್ಟರು. ಅದಕ್ಕೆ ಬಾಡಿಗೆ ಕೇವಲ ಹತ್ತು ರೂಪಾಯಿಗಳು. ಆ ಮನೆಯಲ್ಲೇ ಏಳು ವರ್ಷಗಳ ಕಾಲ ವಾಸವಾಗಿದ್ದೆವು. ಅಲ್ಲಿದ್ದಾಗ ಅಸೋಸಿಯೇಷನ್ನಿನ ರಜತ ಮಹೋತ್ಸವವಾಯಿತು. ಆಗಿನ ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರವರು ಸಮಾರಂಭದ ಉದ್ಘಾಟನೆ ಮಾಡಿ ಅಧ್ಯಕ್ಷತೆ ವಹಿಸಿದ್ದರು. ನನಗೆ Fancy Dress Competitionನಲ್ಲಿ `ಆಸ್ಥಾನ ವಿದ್ವಾನ್' ಆಗಿ ಮಾಡಿದ್ದರಿಂದ ಪ್ರಥಮ ಬಹುಮಾನ ದೊರಕಿತ್ತು. ಅಸೋಸಿಯೇಷನ್ನಿನವರು ಮಹಾರಾಜರ ಅಮೃತ ಹಸ್ತದಿಂದ ನನಗೆ ರಜತ ಪದಕ ಪ್ರದಾನ ಮಾಡಿಸಿದರು. ಆ ವರುಷ ಜೆ. ಎನ್. ಅಯ್ಯರ್‌ರವರು ಅಸೋಸಿಯೇಷನ್ನಿನ ಅಧ್ಯಕ್ಷರಾಗಿದ್ದರು.

ಏಳು ಮನೆ ಚೇಲಿ ಪದವಿಯಿಂದ ಕುರ್ಲಾದಲ್ಲಿದ್ದ ನನ್ನದೆಂಬ ಮನೆಯಲ್ಲಿ ಏಳು ವರುಷ ಕಾಲವಾಸವಾಗಿದ್ದು ಈಗಿರುವ ಚೆಂಬೂರಿನ ಸಿಂಧಿ ಸೊಸೈಟಿಯ ಮನೆಗೆ 1960ನೇ ಇಸವಿ ಡಿಸೆಂಬರ್ 23ನೇ ತಾರೀಖು ಅಡಿಯಿಟ್ಟು ಮೂವತ್ತೇಳು ವರುಷಗಳಿಗೂ ಮೀರಿ ವಾಸಿಸುತ್ತಿದ್ದೇನೆ. ಈ ಮನೆಯೂ ಸಹ ಸಿಂಧಿ ಸೊಸೈಟಿಯಲ್ಲೇ ವಾಸವಾಗಿದ್ದ ನನ್ನ ವೀಣಾ ಶಿಷ್ಯೆಯೊಬ್ಬರ ಮುಖಾಂತರ ದೊರಕಿತು. ಹೀಗೆ ಹೆಜ್ಜೆ ಹೆಜ್ಜೆಗೂ ನನ್ನಿಂದ ವೀಣೆ ಕಲಿಯುತ್ತಿದ್ದವರ ಮುಖಾಂತರವೇ ನನಗೆ ಶಾಶ್ವತವಾದ ವಸತಿ ಸೌಕರ್ಯವಾಗಿ ಇಲ್ಲಿ ನೆಲೆಸಲು ಅನುವಾಗಿದೆ.

ಕುರ್ಲಾದಲ್ಲಿರುವವರೆಗೂ ಅಸೋಸಿಯೇಷನ್ನಿನ ಕಾರ್ಯಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಚೆಂಬೂರಿಗೆ ಬಂದ ಮೇಲೆ ಅನಿವಾರ್ಯವಾಗಿ ಅಸೋಸಿಯೇಶನ್ನಿನ ಸದಸ್ಯತ್ವನ್ನು ಬಿಡಬೇಕಾಗಿ ಬಂತು. ಅಸೋಸಿಯೇಶನ್ನಿನ ಸಂಪರ್ಕವೂ ಕಡಿಮೆಯಾಗಿ ಗಣಪತಿ ವಿಸರ್ಜನೆ ದಿವಸ ಮಾತ್ರ ಹಾಜರಿ ತಪ್ಪದೆ ಹಾಕುವ ಸಂಪ್ರದಾಯವಾಯಿತು. ನಾನು ಸದಸ್ಯತ್ವವನ್ನು ಬಿಟ್ಟರೂ ನನ್ನ ಶ್ರೀಮತಿ (ಜಯಮ್ಮ ಸಿ. ಕೆ. ಎಸ್. ರಾವ್) ಸದಸ್ಯತ್ವವನ್ನು ಪಡೆದು ನಡೆಸಿಕೊಂಡು ಬಂದು ಸಂಪರ್ಕದ ಕೊಂಡಿಯೊಂದನ್ನು ಉಳಿಸಿದ್ದಾಳೆ. ಆದರೆ ನಾನು ಸದಸ್ಯನಲ್ಲದಿದ್ದರೂ ಅಸೋಸಿಯೇಷನ್ನಿನ ಎಲ್ಲಾ ಕಾರ್ಯಕಾರೀ ಸಮಿತಿಯವರು ನನ್ನ ಮೇಲೆ ಅದೇ ಹಿಂದಿನ ಅಭಿಮಾನವನ್ನು ಇಟ್ಟುಕೊಂಡಿದ್ದಾರೆ. ಯಾವುದೇ ವಿಶೇಷ ಸಂದರ್ಭಗಳಲ್ಲಾಗಲೀ, ಯಾರಾದರೂ Dignitories ಬಂದಾಗಲಾಗಲೀ ನನ್ನ ಪತ್ರ ಮುಖೇನವಾಗಲೀ, ಮುಖತಹ ಆಗಲೀ, ದೂರವಾಣಿ ಸಂಪರ್ಕದಿಂದಾಗಲೀ ಆಹ್ವಾನಿಸಿ

# ಸಂಮೋಹಿನಿ ಚಿಕಿತ್ಸೆ - 13

● ಡಾ| ಉಷಾರಾವ್

## ಸಂಮೋಹಿನಿ ಚಿಕಿತ್ಸೆಗೆ ಮುನ್ನ ಯೋಗ

ಯೋಗ ಹಾಗೂ ಸಂಮೋಹನ ವಿದ್ಯೆ ನಡುವಣ ಸಂಬಂಧದ ಬಗೆಗೆ ಕಳೆದ ಅಧ್ಯಾಯದಲ್ಲಿ ಪರಿಚಯಿಸಲಾಗಿದೆ. ವಾಸ್ತವವಾಗಿ ರೋಗಿಗಳ ಅನೇಕ ಬಗೆಯ ಕಾಯಿಲೆಗಳನ್ನು ಯೋಗಾಸನಗಳು ಹಾಗೂ ಸಂಮೋಹಿನಿ ಚಿಕಿತ್ಸಾ ವಿಧಾನಗಳ ಸಂಯೋಜನೆಯಿಂದ ಗುಣಪಡಿಸಬಹುದು. ರೋಗಿಗಳು ಸಂಮೋಹಿನಿ ಚಿಕಿತ್ಸಾ ವಿಧಾನಗಳ ಸಂಯೋಜನೆಯಿಂದ ಗುಣಪಡಿಸಬಹುದು. ರೋಗಿಗಳು ಸಂಮೋಹಿನಿ ಚಿಕಿತ್ಸಾ ವಿಧಾನವನ್ನು ಅನುಸರಿಸುವಲ್ಲಿ ದುರ್ಬಲರಾದಾಗ, ಈ ಚಿಕಿತ್ಸಾಕ್ರಮದ ಬಗೆಗೆ ಕೆಲವು ಯೋಗಾಸನಗಳನ್ನು ಅಭ್ಯಸಿಸಿದರೆ ಸಾಮಾನ್ಯವಾಗಿ ಯಶಸ್ಸು ದೊರಕುವುದು.

ನನ್ನ ರೋಗಿಯೊಬ್ಬರ ವ್ಯಾಧಿಯ ಇತಿಹಾಸ ಹಾಗೂ ನಾನು ಅನುಸರಿಸಿದ ಚಿಕಿತ್ಸಾ ವಿಧಾನದ ಬಗೆಗೆ ಇಲ್ಲಿ ವಿವರಿಸುತ್ತೇನೆ.

### ವ್ಯಾಧಿಯ ಇತಿಹಾಸ

ಮಾನಸಿಕ ಹಾಗೂ ಕಾತರದ ಸಮಸ್ಯೆ ಪರಿಹಾರಕ್ಕಾಗಿ 32 ವರ್ಷ ವಯಸ್ಸಿನ ವಿವಾಹಿತ ಸುಂದರ ತರುಣಿಯೊಬ್ಬಳು ತನ್ನ ಪತಿಯೊಡನೆ ನನ್ನ ಬಳಿ ಬಂದಳು. ಆಕೆಯ ಹೆಸರು ಗೋಮತಿ. ಆಗಾಗ್ಗೆ ಆಕೆ ಉಗ್ರವಾಗಿ ವರ್ತಿಸುತ್ತಾಳೆ ಎಂದು ಆಕೆಯ ಪತಿ ತಿಳಿಸಿದರು.

ಸುಮಾರು ಎರಡು ಎರಡೂವರೆ ವರ್ಷಗಳಿಂದ ಹೀಗೆ ನಡೆಯುತ್ತಿತ್ತು. ಸುಮಾರು ಮೂರು ವರ್ಷಗಳ ಹಿಂದೆ ಗೋಮತಿ ತಲೆ ನೋವು, ಹೊಟ್ಟೆನೋವು ಮತ್ತು ಕೆಲವು ಸಮಯಗಳಲ್ಲಿ ಸ್ವಲ್ಪ ಗುಂಡಿಗೆ ಬಡಿತದ ತೀವ್ರತೆ ಮುಂತಾದ ಸಾಧಾರಣ ತೊಂದರೆಗಳನ್ನು ಅನುಭವಿಸುತ್ತಿದ್ದಳು. ಚಿಕಿತ್ಸೆಗಾಗಿ ತಮ್ಮ ಕುಟುಂಬದ ಡಾಕ್ಟರ್ ಬಳಿ ಹೋದರೂ ಹೆಚ್ಚು ಪ್ರಯೋಜನವಾಗಲಿಲ್ಲ. ಕುಟುಂಬದ ಡಾಕ್ಟರ್ ಸಲಹೆ ಮೇರೆಗೆ ಆಕೆ ನುಂಗುತ್ತಿದ್ದ ಮಾತ್ರೆಗಳ ಸಡೇಟಿವ್ ಪರಿಣಾಮಗಳಿಂದಾಗಿ ಸದಾ ನಿದ್ರೆಯ ಜೊಂಪಿನಲ್ಲಿರುತ್ತಾಳೆ. ಮೂರು ನಾಲ್ಕು ತಿಂಗಳುಗಳ ನಂತರ ಈ ರೋಗದ ಚಿಹ್ನೆಗಳು ಮತ್ತಷ್ಟು ತೀವ್ರಗೊಂಡವು. ತಡೆಯಲಾರದಂಥ ತಲೆನೋವು ಅಲ್ಲದೆ ಆಗಾಗ್ಗೆ ವಾಂತಿಯಾಗುತ್ತಿತ್ತು. ಗುಂಡಿಗೆಯ ಬಡಿತದ ವೇಗವೂ ಜಾಸ್ತಿಯಾಯಿತು. ತೀವ್ರ ಆತಂಕದ ಸ್ವಭಾವದ ಹೆಣ್ಣಾದಳು ಆಕೆ ಕೆಲವು ಸಮಯ ಯಾವ ಕಾರಣವೂ ಇಲ್ಲದೆ ನೆರೆಹೊರೆಯವರೊಂದಿಗೆ ಜಗಳವಾಡುತ್ತಿದ್ದಳು. ವಿದ್ಯಾಭ್ಯಾಸದಲ್ಲಿ ಸರಿಯಾಗಿ ಗಮನ ನೀಡುತ್ತಿಲ್ಲವೆಂದು ತನ್ನ ಮಗಳು ಹಾಗೂ ಮಗನನ್ನು ಬೈಯಲಾರಂಭಿಸಿದಳು. ಅವರನ್ನು ಕೋಲಿನಿಂದ ಹೊಡೆಯಲಾರಂಭಿಸಿದಳು. ಒಂದು ಮಾತಿನಲ್ಲಿ ಹೇಳುವುದಾದರೆ ಆವಳ ಪರಿಸ್ಥಿತಿ ತೀವ್ರ ಹದಗೆಟ್ಟಿತು.

ಒಂದು ದಿನ ಗೋಮತಿ ಮನೆಗೆ ಆಕೆಯ ಗೆಳತಿ ಬಂದಳು. ಅದೂ ಇದೂ ಮಾತನಾಡುತ್ತ ಈಗಿನ ಕಾಲದಲ್ಲಿ ಅವಿವಾಹಿತ ಹುಡುಗಿಯರು, ಮುಖ್ಯವಾಗಿ ಕಚೇರಿಗಳಲ್ಲಿ ಅಧಿಕಾರಿಗಳಿಗೆ ವೈಯಕ್ತಿಕ ಕಾರ್ಯದರ್ಶಿ (ಪರ್ಸನಲ್ ಸೆಕ್ರೆಟರಿ)ಗಳಾಗಿರುವ ಯುವತಿಯರು ವಿವಾಹಿತ ಗಂಡಸರೊಡನೆ ಸಲಿಗೆ ಸ್ನೇಹ ಬೆಳೆಸಿಕೊಂಡು ಅನ್ಯೋನ್ಯ ದಂಪತಿಗಳ ಜೀವನವನ್ನು ಹಾಳು ಮಾಡುತ್ತಾಳೆ ಎಂದು ಸಮಸ್ಯೆಯಾಗಿ ಹೇಳಿದರು. ಆದರೆ ಅಂದಿನಿಂದಲೇ ಗೋಮತಿ ತನ್ನ ಗಂಡನನ್ನು ಸಂಶಯಿಸಲಾರಂಭಿಸಿದಳು. ಆಗಾಗ್ಗೆ ಆತನೊಂದಿಗೆ ಜಗಳವಾಡುತ್ತಿದ್ದಳು. ಗೃಹಕೃತ್ಯಗಳನ್ನು ಉಪೇಕ್ಷಿಸಿದಳು. ಮಕ್ಕಳನ್ನು ನಿರ್ಲಕ್ಷಿಸಿದಳು. ಹೀಗೆ ಸಂಶಯದ ವಿಷಬೀಜ ಮೊಳೆತು ತೀವ್ರ ಮಾನಸಿಕ ಕುಸಿತದಿಂದಾಗಿ ಆಕೆಯ ವರ್ತನೆ ಹತೋಟಿ ಮೀರಿ ಉಗ್ರವಾಯಿತು. ಗೋಮತಿಯ ಈ ಪರಿಸ್ಥಿತಿ ಆತ್ಮಹತ್ಯೆಗೆ ಹಾದಿ ಮಾಡಬಹುದು ಅಥವಾ ಆಕೆ ಮಾನಸಿಕ ರೋಗದ ಆಸ್ಪತ್ರೆಗೆ ಸೇರಬೇಕಾಗಿ ಬರಬಹುದು ಎಂಬ ಗಂಭೀರ ಪರಿಸ್ಥಿತಿಯನ್ನು ಆಕೆಯ ಪತಿ ಚೆನ್ನಾಗಿ ಅರ್ಥ ಮಾಡಿಕೊಂಡರು.

### ಸೈಕೋ ಪ್ಯಾಥೋ ಜೆನಿಸಿಸ್

(ಕಾಯಿಲೆಯ ಕಾರಣವನ್ನು ಕಂಡುಹಿಡಿಯುವ ವಿಧಾನ)

ಗೋಮತಿಯ ಪತಿ ನೀಡಿದ ಮಾಹಿತಿಗಳ ಆಧಾರದ ಮೇಲೆ ಆಕೆಯ ವ್ಯಾಧಿಯ ಕಾರಣವನ್ನು ಕಂಡು ಹಿಡಿಯಬಹುದು. ಆ ಮಾಹಿತಿಗಳು ಹೀಗಿವೆ:

### ವ್ಯಾಧಿಗೆ ಕಾರಣವಾದ ಮುನ್ ಚಿಹ್ನೆಗಳು

(ವ್ಯಕ್ತಿಯ ಮೂಲಭೂತ ದೋಷಗಳು)

ವಿಪರೀತ ಭಾವಾವೇಶ, ಸಂಕೋಚ ಸ್ವಭಾವ ಮತ್ತು ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗದ ಸ್ಥಿತಿ.

### ವ್ಯಾಧಿಯನ್ನು ತೀವ್ರಗೊಳಿಸುವ ಅಂಶಗಳು.

ಹಸ್ತ ಪ್ರದಾಂಗಳಯುವ ಸಲಹೆಗಳು. ಉದಾಹರಣೆಗೆ ತನ್ನ ಪತಿ ಸುಂದರ ಯುವತಿಯಾದ ಆತನ ಪಿ. ಎ. (ಖಾಸಗಿ ಕಾರ್ಯದರ್ಶಿ)ಯಲ್ಲಿ ಅನುರಕ್ತನಾಗಿರುವನೆಂಬ ಆಕೆಯ ಸ್ನೇಹಿತೆಯ ಅಭಿಪ್ರಾಯ.

### ಫಲಿತಾಂಶ

1. ಅತಿಯಾದ ವ್ಯಾಕುಲ ಬೆಳೆಯಿತು.
2. ಅನಂತರ ಮಾನಸಿಕ ಕುಸಿತ
3. ಗೃಹಕೃತ್ಯ ಹಾಗೂ ಮಕ್ಕಳ ಬಗೆಗೆ ಉಪೇಕ್ಷೆ.
4. ಪತಿಯ ನಡೆವಳಿಕೆ ಬಗೆಗೆ ಸಂದೇಹಿಸಲಾರಂಭಿಸಿದಳು.
5. ಉಗ್ರ ನಡೆವಳಿಕೆಗೆ ಪ್ರೇರೇಪಣೆ.

### ಚಿಕಿತ್ಸೆ

ಗೋಮತಿ ತನ್ನ ಹಿಂಜರಿಕೆಯ ಸ್ವಭಾವದಿಂದಾಗಿ ಸಂಮೋಹನಕ್ಕೆ ಸೂಕ್ಷ್ಮ ವ್ಯಕ್ತಿಯಾಗಿರಲಿಲ್ಲ. ಆದುದರಿಂದ ನಾನು ಸಂಮೋಹಿನಿ ಚಿಕಿತ್ಸಾ ವಿಧಾನಕ್ಕೆ ಕೈ ಹಾಕಲಿಲ್ಲ. ಪ್ರತಿಯಾಗಿ ಯೋಗದ ವ್ಯಾಯಾಮಗಳ ಬಗೆಗೆ ಆಕೆಗೆ ತಿಳಿಸಿ ಹೇಳಲಾರಂಭಿಸಿದೆ. ಆಶ್ಚರ್ಯವೆಂದರೆ ಗೋಮತಿಗೆ ಆ ವಿಷಯಗಳೆಲ್ಲ ಚೆನ್ನಾಗಿ ತಿಳಿದಿತ್ತು. ಆಕೆ ಅದರಲ್ಲಿ ಒಂದು ಕೋರ್ಸ್ ಮುಗಿಸಿದ್ದಳು. ಅಲ್ಲದೆ ಹಿಂದೊಮ್ಮೆ ನಿಯತವಾಗಿ ಕೆಲವು ವ್ಯಾಯಾಮಗಳನ್ನು ಮಾಡುತ್ತಿದ್ದಳು. ಆದುದರಿಂದ ಕೆಲವು ಯೋಗದ ವ್ಯಾಯಾಮಗಳನ್ನು ಮಾಡುವ ನನ್ನ ಸಲಹೆಗೆ ತಕ್ಷಣ ಆಕೆ ಒಪ್ಪಿಕೊಂಡಳು. ಕೆಲವು ಯೋಗಿಕ್ ವ್ಯಾಯಾಮಗಳನ್ನು ಮಾಡುವ ಮೂಲಕ ಕಳವಳ ಹಾಗೂ ಮಾನಸಿಕ ಕುಸಿತದ ಮಟ್ಟವನ್ನು ಕಡಿಮೆ ಮಾಡಲು ಸಾಧ್ಯವಾದರೆ, ಅದು ಆಕೆಯ ಮನಸ್ಸಿನಲ್ಲಿ ಸಂಮೋಹಿನಿ ಚಿಕಿತ್ಸಾ ವಿಧಾನದ ಬಗೆಗೆ ನಂಬಿಕೆ ಉಂಟಾಗಬಹುದು ಎಂದು ನಾನು ಭಾವಿಸಿದೆ. ಅದರಿಂದ ಅದ್ಭುತ ಫಲಿತಾಂಶಗಳು ದೊರೆತವು. ಕೆಳಕಂಡ ರೀತಿಯಲ್ಲಿ ಶವಾಸನವನ್ನು ಅಭ್ಯಸಿಸಲು ಗೋಮತಿಗೆ ಹೇಳಿದೆ.

### ಶವಾಸನ

ಅಂಗಾತವಾಗಿ ಮಲಗಿ ಎರಡು ಕೈಗಳನ್ನು ಶರೀರದಿಂದ ಸ್ವಲ್ಪ ದೂರವಾಗಿಟ್ಟುಕೊಂಡು ಕಾಲುಗಳನ್ನು ಪರಸ್ಪರ ಕೆಲವು ಸೆಂಟಿಮೀಟರ್‌ಗಳಷ್ಟು ಅಗಲಿಸಿಟ್ಟುಕೊಳ್ಳಲು ಹೇಳಿದೆ. ಹಿಮ್ಮಡಿಗಳು ಮತ್ತು ಕಾಲ್ಬೆರಳುಗಳು ಮೇಲ್ಮುಖವಾಗಿರಬೇಕೆಂದೂ ಎರಡೂ ಕೈಗಳ ಬೆರಳುಗಳನ್ನು ಸಹಜಸ್ಥಿತಿಯಲ್ಲಿ ಮಡಿಸಿದೆಯೋ ಎಂಬಂತೆ ಸ್ವಲ್ಪ ಬಾಗಿಸಿರಬೇಕೆಂದೂ ಆಕೆಗೆ ತಿಳಿಸಿದೆ. ತಲೆಯನ್ನು ನೇರವಾಗಿಟ್ಟುಕೊಳ್ಳಬೇಕು. ಕಣ್ಣುಗಳು ಮುಚ್ಚಿರಬೇಕು ಮತ್ತು ಶವಾಸನದ ಸ್ಥಿತಿಯಲ್ಲಿರುವವರೆಗೂ ಶರೀರದ ಯಾವುದೇ

ಗೌರವಿಸಿದ್ದಾರೆ. ಇದಕ್ಕೆ ಅಸೋಸಿಯೇಷನ್ನಿನ, ಆಗಾಯಿತು ಎಲ್ಲಾ ಕಾರ್ಯಕಾರೀ ಸಮಿತಿಯ ಸದಸ್ಯರಿಗೂ ನಾನು ಆಭಾರಿಯಾಗಿದ್ದೇನೆ.

ಮೈಸೂರು ಅಸೋಸಿಯೇಷನ್ನು ಆಗಿಗೂ ಈಗಿಗೂ ಇತೋಪ್ಯತಿಶಯವಾಗಿ ಬೆಳೆದಿದೆ. ಸ್ವರ್ಣ ಮಹೋತ್ಸವ, ವಜ್ರಮಹೋತ್ಸವಗಳನ್ನು ವಿಜೃಂಭಣೆಯಿಂದ ನೆರವೇರಿಸಿದೆ. ಬಿ. ಜಿ. ಖೇರ್‌ರವರು ಉದ್ಘಾಟಿಸಿದ ಪುಸ್ತಕ ಭಂಡಾರವು ಸಾಕಷ್ಟು ವಿಸ್ತರಿಸಿ ಸದಸ್ಯರಿಗೆ ಪುಸ್ತಕ ವಿತರಣೆಯನ್ನು ಶ್ಲಾಘ್ಯರೀತಿಯಲ್ಲಿ ಮಾಡುತ್ತಿರುವುದಲ್ಲದೆ, ಉಚಿತ ವಾಚನಾಲಯದಲ್ಲಿ ದೈನಿಕ, ಮಾಸಿಕವಾಗಿ ಹಾಗೂ ವಾರಪತ್ರಿಕೆಗಳನ್ನು ತರಿಸಿ ಓದುಗರಿಗೆ ಅನುವು ಮಾಡಿಕೊಟ್ಟಿದೆ. ಈಚೆಗೆ ಕಟ್ಟಡದ ವಿಸ್ತರಣೆ ಸಂದರ್ಭದಲ್ಲಿ ನಿಲ್ಲಿಸಿದ್ದ Messಕಾರ್ಯಕ್ರಮವನ್ನು ಪುನಃ ಪ್ರಾರಂಭಿಸಿರುವುದು ತುಂಬಾ ಹರ್ಷದಾಯಕವಾದ ಸಂಗತಿ. ಇದೇ ರೀತಿ ಮೈಸೂರು ಅಸೋಸಿಯೇಷನ್ನು ತನ್ನ 'ಸಹಸ್ರ ಚಂದ್ರದರ್ಶನ' (81 ವರ್ಷ) ಮಹೋತ್ಸವವಲ್ಲದೆ ಶತಮಾನೋತ್ಸವವನ್ನು ಅದ್ದೂರಿಯಾಗಿ ನೆರವೇರಿಸಿ ಸದಸ್ಯರುಗಳ ಪರಸ್ಪರ ಸ್ನೇಹ ಸಂಬಂಧಗಳ ಬೆಸುಗೆಯಾಗಿ ಶಾಶ್ವತತ್ವ ಪಡೆಯಲಿ ಎಂದು ಹಾರೈಸಿ ನನ್ನ ಈ ಅನಿಸಿಕೆಗಳನ್ನು ಮುಗಿಸುತ್ತೇನೆ.

---

## ರಾಯಘಡದ ಪ್ರವಾಸ

*(ಪುಟ 5ರಿಂದ)*

1689 ನವೆಂಬರ್ 3ರಂದು ಔರಂಗಜೇಬನ ಸರದಾರ ಝುಲ್ ಫಿಕರ್ ಖಾನ್‌ನ ಧಾಳಿಗೆ ಸಿಕ್ಕಿ ದುರ್ಗ ತತ್ತರಿಸಿತು ಇವನಿಗೆ ಇಲ್ಲಿ ಭಾರೀ ಲೂಟಿ ದೊರೆಯಿತು.

1818 ಮೇ 10ರಂದು ಇಂಗ್ಲೀಷರು ರಾಯಗಡದ ಮೇಲೆ ಆಕ್ರಮಣ ನಡೆಸಿ, ಅನೇಕ ಕಟ್ಟಡಗಳನ್ನೂ, ಕೋಟೆಯ ಅನೇಕ ಭಾಗಗಳನ್ನೂ ತೋಪಿನಿಂದ ಹಾರಿಸಿದರು, ಸುಟ್ಟರು, ಲೂಟಿ ಮಾಡಿದರು. ಹಿಂದೂ ಸಾಮ್ರಾಜ್ಯದ ಧ್ವಜಧಾರೆಯಂತಿದ್ದ ರಾಯಗಡ ತನ್ನ ವೈಭವವನ್ನು ಸಂಪೂರ್ಣವಾಗಿ ಕಳೆದು ಕೊಂಡಿತು. ಇಂದಿಗೂ ಅಂದಿನ ವೈಭವದ ಪ್ರತೀಕವಾಗಿ ತಲೆ ಎತ್ತಿ ನಿಂತಿರುವ ರಾಯಗಡ ರಾಷ್ಟ್ರದ ಹೆಮ್ಮೆಯ ಸ್ಥಳವಾಗುಳಿದಿದೆ.

ನಮ್ಮ ತಂಡ ರಾಯಗಡವನ್ನೆಲ್ಲಾ ಸುತ್ತಿ ಸಂಜೆ 4 ಗಂಟೆಗೆ ಅಲ್ಲಿಂದ ಹೊರಟಿತು. ಕೆಲ ಸಾಹಸಿ ಮನೋಭಾವದ ಕೆಲವರು ಕಾಲ್ನಡಿಗೆಯಿಂದ ಇಳಿದು ಹಂತ ಹಂತದಲ್ಲು ಸಿಕ್ಕುವ ದುರ್ಗಮ ಪ್ರದೇಶಗಳನ್ನು ನೋಡಿ ಸಂತೋಷ ಪಟ್ಟರು. ಮಿಕ್ಕವರು ರೋಪ್ ವೇ ಇಂದ ಇಳಿದರು. ಐತಿಹಾಸಿಕ ಸ್ಥಳವನ್ನು ನೋಡಿದ ತೃಪ್ತಿ ಎಲ್ಲರ ಮನವನ್ನು ತುಂಬಿತ್ತು. ಸಂಜೆ 6 ಗಂಟೆಗೆ ನಮ್ಮ ತಂಡ ರಾಯಗಡಕ್ಕೆ Bye Bye ಹೇಳಿ ಮುಂಬೈ ದಾರಿ ಹಿಡಿದಿತ್ತು. ●

## ಬಾಗಿಲಿನಾಚೆ

ಆಚೆ ಕಡೆ ಏನಿದೆ ಏನ್ನೋನ್
ಯಾರ್ಗೂ ಗೊತ್ತಿಲ್ಲ
ಬಾಗಿಲನ್ ಬಿಟ್ಟು ಆಚೆಗ್ಹೋದೋನ್
ವಾಪಸ್ ಯಾರೂ ಬಂದಿಲ್ಲ.
ನಾನ್ ಹೋಗಿದ್ದೆ ಅಲ್ಲಿ ಹೀಂಗೈತಿ
ಅಂತ ಯಾರೂ ಹೇಳ್ಲಿಲ್ಲ
ಆಕಡೆ ಏನಿದೆ ಎಂಬೋದ್ ಮಾತ್ರ
ಊಹಾಪೋಹ ಎಲ್ಲಿ

***

ಭಗವಂತ ಹೇಳ್ದ ಭಗವದ್ಗೀತೆಲ್
ಶಾಗಿರ್ದ ಅರ್ಜುನಂಗೆ
ನೋಡೊ ಇಲ್ಲಿ ಹುಟ್ಕೊಕ್ ಮುಂಚೆ
ಪ್ರಾಣಗಳ ಇಲ್ತೆ ಇಲ್ಲ
ಸತ್ಕೊಡ್ ಮೇಲೆ ಎಲ್ಲೀನ್ ಹೋಗ್ತಾವ್
ಅನ್ನೊದ್ ದೇವ್ರೆ ಬಲ್ಲ

***

ಈಂಗಿರ್‍ದ್ಯಾಗ ಸತ್ತೆ ಯಾರದ್ರು
ನೀನ್ಯಾಕಳ್ತಿ ಜೊಭದ್ರ
ಇದ್ರೆ ಸತ್ರೆ ಎಲ್ಲಾ ಒಂದೇ
ಬಿಡೊ ಬಾಣ ದರಿದ್ರ

***

ಬಾಗಿಲ್ದಾಚೆ ಏನೈತಂತ
ಯಾಚ್ನೆ ಮಾಡ್ತಾ ಸತ್ರೆ
ಯಾಚ್ನೆ ಮಾಡ್ತಾ ಮಾಡ್ತಾ ಹೊದ್ರೆ
ಹುಟ್ಕೊಂದ್ ಹಿಡಿಯಾದ್ ಆತ್ಮೆ

***

ಬಾಗಿಲ್ದಾಚೆ ಏನಿಲ್ದಿದ್ರೆ
ಕಟ್ಟು ನಿಟ್ಟು ಯಾಕೆ
ಮನಸ್ಸಿಗೆ ಬಂದ್ಹಾಗೆ ಬದುಕಿರಬಹುದು
ಪಾಪ ಪುಣ್ಯ ಬೇಕೆ?

***

ಹೇಗಾದ್ರೆ ಹಾಗೆ ಇರ್‍ಕೊದ್ ನಾವು
ಯಾರ್‍ನಲೇನಾರ್ ಒಬ್ರು
ಯಾವ ಎಣ್ಣಾದ್ರೂನು ಲಪಟಾಯಿಸಬೈದು
ಎಲಆರ್ ಮಡ್ಕೊಕದ್ರು

***

ಆಸೆ ಎಲ್ಲಾ ಪೂರೈಸ್‌ಕೊಂಡು
ಬೇಕ್ದಾದಾಗೆ ತಂದು,
ಮಂಚದ ಮೇಲೆ ಮಲಗಿರಬೌದು
ಎಲ್ಲರನ್ನು ಒದ್ದು.

***

ಈಗಿನ ಜನ್ಮಕ್ಕೆ ಬೆಲೆ ಬರ್‍ತೈತೆ
ಮುಂದೇನಾದ್ರೂ ಇದ್ರೆ
ಈಗಿನ ಬದುಕಿಗೆ ಅರ್ಥ ಏನಿಲ್ಲ
ಬಾಗಿಲ್ದಾಚೆ ಖಾಲಿ ಇದ್ರೆ

***

ಬುದ್ಧಿವಂತ್ರೆಲ್ಲಾ ಯೋಚಿಸಬೇಕು
ಶಾಸ್ತ್ರವೆಲ್ಲಾ ಬರದು,
ಅಂದರೆ ಮನುಕುಲದವರನ್ನು ಎಲ್ಲಾದ್ರೂ ಮಂಗನನ್ನು
ಮಾಡಿದ್ದಾರಾ?
ಏನೂ ತಿಳಿದಿದ್ರು

***

ಖಾತ್ರಿಯಾಗಿ ಹೇಳೊತನಕ
ಬರಬ್ಯಾಡನನ್ ಸುದ್ದೀಗೆ ನಾನ್ಹೆಂಗಾದ್ರೂ ಬದುಕಿರ್‍ತೀನಿ
ಎಂಗ್ ಬಂತೊ ನನ್ ಬುದ್ದೀಗೆ

- ಅಜ್ಞಾತ

**P.S.:** ಇಲ್ಲಿ ಬಾಗಿಲು ಅಂದರೆ ಮರಣ., ಮರಣದಾಚೆ ಏನೂ ಇಲ್ಲದಿದ್ದರೆ, ಈಚೆಗೂ ಬೆಲೆ ಇಲ್ಲಅನ್ನುವ ಅಭಿಪ್ರಾಯವನ್ನು ಮೂಡಿಸಲು ಪ್ರಯತ್ನಿಸಿದ್ದೇನೆ.

## LAUGH A WHILE

The psychiatrist was trying to establish before the court the defendant's diminished mental capacity: "The defendant is so absentminded he can't remember his best friends. One minute he'll be affable and the next he can't remember you from Adam."

***

A youngster with some bundles asked a passerby, "will you open the gate for me?" The passerby said, "why, of course, sonny." The boy replied. "Thanks, Mister. It was just painted and I didn't want to get my hands messy."

Complied by
**Ramprasad**

ಭಾಗವನ್ನು ಅತ್ತ ಇತ್ತ ಚಲಿಸಕೂಡದೆಂದೂ ಆಕೆಗೆ ಹೇಳಲಾಯಿತು. ತನ್ನ ಉಸಿರಾಟದತ್ತ, ತನ್ನ ಮನಸ್ಸನ್ನು ಕೇಂದ್ರೀಕರಿಸಬೇಕೆಂದೂ ಆಕೆಗೆ ಹೇಳಿದೆ. ತನ್ನ ಮನಸ್ಸು ಅತ್ತ ಇತ್ತ ಚಲಿಸುತ್ತಿದೆ ಎಂಬ ಭಾವನೆ ಉಂಟಾದಾಗಲೆಲ್ಲ ತಕ್ಷಣ ಮನಸ್ಸನ್ನು ಉಸಿರಾಟದತ್ತ ನಿಧಾನವಾಗಿ ನಿಲ್ಲಿಸಲು ಪ್ರಯತ್ನಿಸಬೇಕು ಎಂದೂ ಹೇಳಿದೆ.

(ಇದು ಮನಸ್ಸಿನಲ್ಲಿ ಬೇರೆ ಯೋಚನೆಗಳು ತಲೆ ಹಾಕದಂತೆ ತಡೆಗಟ್ಟಲು ನೆರವಾಗುತ್ತದೆ)ಇದರ ಜತೆಗೇ ನಿದ್ರಿಸಕೂಡದೆಂದೂ ಆಕೆಗೆ ಹೇಳಲಾಯಿತು. ಸುಮಾರು 5ರಿಂದ 7 ನಿಮಿಷಗಳ ವರೆಗೆ ಈ ಸ್ಥಿತಿಯಲ್ಲಿ ಇದ್ದು, ನಂತರ ಗೋಮತಿಗೆ ಕಣ್ಣುಗಳನ್ನು ತೆರೆಯಲು ಮತ್ತು ನಿಧಾನವಾಗಿ ಕೈಕಾಲುಗಳನ್ನು ಚಲಿಸಿ ಎದ್ದು ಕುಳಿತುಕೊಳ್ಳಲು ತಿಳಿಸಲಾಯಿತು. ಇದು ಒಂದು ಸಂಪೂರ್ಣ ಸುತ್ತಿನ ಶವಾಸನ. 10 ನಿಮಿಷಗಳ ಶವಾಸನದ ಬಳಿಕ ಗೋಮತಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಲು ತಿಳಿಸಿದೆ. ಆಕೆಗೆ ಹೊಸ ಉಲ್ಲಾಸದ ಅನುಭವ ಉಂಟಾಯಿತು. ಜತೆಗೆ ಈ ಅಭ್ಯಾಸವನ್ನು ಮುಂದುವರಿಸುವಂತೆ ಆಕೆಗೆ ಸ್ನೇಹಮಯವಾಗಿ ಪ್ರೋತ್ಸಾಹಿಸಿದೆ. ಆದರೆ, ಪ್ರಾರಂಭದ ವಾರಗಳಲ್ಲಿ ನನ್ನ ಪ್ರೋತ್ಸಾಹದ ಮಾತುಗಳಿಗೆ ಸರಿಯಾಗಿ ಸ್ಪಂದಿಸಲಿಲ್ಲ. ಆದರೆ ನಿಧಾನವಾಗಿ ಗೋಮತಿಯಲ್ಲಿ ಚಿಹ್ನೆಗಳು ಗೋಚರಿಸಲಾರಂಭಿಸಿದವು. ಆಕೆ ನನ್ನತ್ತ ಹೆಚ್ಚು ಹೆಚ್ಚಾಗಿ ತೆರೆದುಕೊಂಡಳು.

ಫ್ರಾಯ್ಡ್‌ನ ಸೈಕೋಅನಲಿಟಿಕ್ ವಿಧಾನದ `ಮುಕ್ತ ಮಾತುಕತೆ' ಗೋಮತಿಯಲ್ಲಿ ಅದ್ಭುತ ಬದಲಾವಣೆಗಳನ್ನು ತಂದಿತು. ಆಗ ಆಕೆ ಸಂಮೋಹಿನಿ ಚಿಕಿತ್ಸೆಗೆ ಸಿದ್ಧಳಾದಳು.

## ಪ್ರಗತಿ

ಮೂರು ವಾರಗಳ ಸಂಮೋಹಿನಿ ಚಿಕಿತ್ಸಾ ಕ್ರಮದ ನಂತರ ಗೋಮತಿಯಲ್ಲಿ ಶಾರೀರಿಕ ಹಾಗೂ ಮಾನಸಿಕ ಖಿನ್ನತೆಯ ಮಟ್ಟ ಕಡಿಮೆಯಾಗಿತ್ತು. ನಿಧಾನವಾಗಿ ಆಕೆ ಗೃಹಕೃತ್ಯದ ಕೆಲಸಗಳತ್ತ ಗಮನ ಕೊಡಲಾರಂಭಿಸಿದಳು. ಹಾಗೂ ತನ್ನ ಮಕ್ಕಳ ವಿದ್ಯಾಭ್ಯಾಸದ ಪ್ರಗತಿ ಬಗೆಗೆ ವಿಚಾರಿಸಲಾರಂಭಿಸಿದಳು. ಪ್ರತಿದಿನ ಕನಿಷ್ಠ ಎರಡು ಸಾರಿ ಸ್ವಯಂ ಸಂಮೋಹಿನಿ ಅಭ್ಯಾಸ ಮಾಡಬೇಕೆಂದು ಆಕೆಗೆ ಹೇಳಲಾಯಿತು. ಔಷಧಗಳನ್ನೂ ನಿಲ್ಲಿಸಲಾಯಿತು. ಆರು ವಾರಗಳ ನಂತರ ಆಕೆ ಸಹಜ ಸ್ಥಿತಿಗೆ ಬಂದು ವಿಶ್ರಾಂತಳಾದಳು. ಆಕೆಯ ಪತಿಗೆ ಹರ್ಷವಾಯಿತು.

## ಉಪಸಂಹಾರ

ಯೋಗದ ವ್ಯಾಯಾಮ ಉಪಯುಕ್ತ ಎಂದು ರುಜುವಾತಾಯಿತು. ಮುಖ್ಯವಾಗಿ ದೈಹಿಕ ಹಾಗೂ ಮಾನಸಿಕ ರಿಲ್ಯಾಕ್ಸೇಷನ್ (ವಿಶ್ರಾಂತಿ)ನಿಂದ ಇದು ಸಾಧ್ಯವಾಯಿತು. ಬರೀ ಯೋಗದ ವ್ಯಾಯಾಮಗಳು ವ್ಯಾಧಿಯನ್ನು ಗುಣಪಡಿಸಲು ನೆರವಾಗುವುದಿಲ್ಲ. ಏಕೆಂದರೆ ಅವು ವ್ಯಕ್ತಿಗತ ದೋಷಗಳನ್ನು ನಿವಾರಿಸುವುದಿಲ್ಲ. ಆದುದರಿಂದ ಅದರ ಜತೆಗೆ ಸಂಮೋಹಿನಿ ಚಿಕಿತ್ಸಾ ಕ್ರಮವನ್ನು ಬಳಸಬೇಕಾಯಿತು. ಏಕೆಂದರೆ ಸಂಮೋಹಿನಿ ಚಿಕಿತ್ಸೆಯ ಮೂಲಕ ಮಾತ್ರ ವ್ಯಕ್ತಿತ್ವದ ಮೂಲಭೂತ ದೋಷಗಳನ್ನು ನಿವಾರಿಸಲು ಸಾಧ್ಯ. ಆದುದರಿಂದ ಗೋಮತಿ ಸಹಕರಿಸುವಂತಾದಾಗ ಹಾಗೂ ಪ್ರೇರಿತಳಾದಾಗ ನಾನು ಆಕೆಯನ್ನು ಸಂಮೋಹಿನಿ ಚಿಕಿತ್ಸೆಗೆ ಒಳಪಡಿಸಿದೆ. ಇಲ್ಲಿ ಒಂದು ವಿಷಯ ಖಚಿತ. ಸಂಮೋಹಿನಿ ಚಿಕಿತ್ಸೆ ಪ್ರಾರಂಭಿಸುವುದಕ್ಕೆ ಮುಂಚೆ ಯೋಗ ಅಭ್ಯಾಸವನ್ನು ಮಾಡುವುದು ಉಪಯುಕ್ತ. ಈ ರೀತಿ ಯೋಗಾಭ್ಯಾಸವು ಸಂಮೋಹಿನಿ ಚಿಕಿತ್ಸಾಪೂರ್ವ ಸಾಧನವಾಗಬಲ್ಲದು.

## QUOTES OF ASIF E.O.

Be a partner of a successful man because he knows how to achieve success

***

If you want to remove evil ffrom the minds of others then first give up evil intentions yourself.

***

He who is slowest in kaing a promise is most faithful in its performance

***

The best form of devotion to be service of God is not to make a show of it.

***

But men must know, that in this theatre of man's life it is reserved only for God and Angels to be lookers-on.

***

One who adopts patience will never be deprived of success though the success may take a long time to reach him.

To the optimist, all doors have handles and hinges; to the pessimist, all doors, have locks and latches.

***

After the ship has sunk, everyone knows how it might have been saved.

***

One who seeks advices earns to recongnise mistakes.

The hardest thing to learn in life is which bridge to cross and which to burn

***

Bad times have a scientific value, these are the occassions when a good learner must learn it.

***

Beware of those who laugh at nothing or at everywhere.

***

God respects me when I work, but he loves me when I sing.

***

The hands that help are holier than the lips that pray.

***

The great aim of education is not knowleege but action.

***

At twenty years of age, the will reigns; at thirty, the wit; and at forty, the judgement.

***

Character must be bright as well as clean

***

The judge interposed, "Are you referring to the defendant - or me? Your description rather fits me.".

# 'ಸುತ್ತಮುತ್ತ'

## ಮುಂಬಯಿ ಕನ್ನಡ ಸಂಘದಲ್ಲಿ ಕೃತಿ ವಿಮರ್ಶೆ ಮತ್ತು ಸಂಗೀತ ಕಾರ್ಯಕ್ರಮ

ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಇತ್ತೀಚೆಗೆ 1996ರ ಕೃತಿಗಳ ವಿಮರ್ಶೆ ನಡೆಯಿತು. ಶ್ರೀಯುತ ದಯಾನಂದ ಸಾಲ್ಯಾನರು ಜಿ. ಪಿ. ಕುಸುಮರ `ಪರುಷ' ಕವನ ಸಂಕಲನವನ್ನು, ಶ್ರೀಮತಿ ರೇವಾ ಎನ್. ವಿ.ಯವರು ಡಾ| ಜಿ. ಡಿ. ಜೋಶಿಯವರ `ಹಯಿಲಗೋಳ ನಾರಾಯಣರಾಯರು: ಜೀವನ ಹಾಗೂ ಸಾಹಿತ್ಯ' ಕೃತಿಯನ್ನು, ಶ್ರೀಯುತ ದಯಾಸಾಗರ ಚೌಟರು, ಶ್ರೀ ಗೋಪಾಲ ತ್ರಾಸಿಯವರ ``ನೆಲದ ನಕ್ಷತ್ರಗಳು" ಕವನ ಸಂಕಲನವನ್ನು ವಿಮರ್ಶಿಸಿದರು. ಶ್ರೀಯುತ ಸೋಮಶೇಖರ ಪಡುಕರೆಯವರು ಸ.ಬಿ.ಕು.ರವರ ``ಬಹಿರಂತರ" ಕೃತಿಯನ್ನು, ಡಾ| ಗಿರಿಜಾ ಶಾಸ್ತ್ರಿಯವರು, ಶ್ರೀಮತಿ ಮೀನಾಕ್ಷಿ ಭಾಸ್ಕರರ ``ಬದುಕೊಂದು ವರ್ತುಲ" ಕೃತಿಯನ್ನು ವಿಮರ್ಶಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ| ಸುನೀತಾ ಎಮ್. ಶೆಟ್ಟಿಯವರು ವಹಿಸಿದ್ದರು. ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಬದುಕನ್ನು ಪ್ರೀತಿಸಿದಾಗಲೇ ಕೃತಿಯೊಂದು ಭವ್ಯತೆಯನ್ನು ಸಾಧಿಸಲು ಸಾಧ್ಯ. ಆದರಿಂದ ವಿಮುಖರಾದಾಗ ಬರೇ ಹೊರ ತೊಗಟನ್ನು ಕುರಿತು ವಿಶ್ಲೇಷಿಸ ಬಹುದೇ ವಿನಃ ಅದರ ಒಳಗಿನ ಸೌಂದರ್ಯ ಅರಿವಾಗಲಾರದು ಎಂದು ನುಡಿದರು. ಕಾರ್ಯಕ್ರಮದ ಕೊನೆಯ ಅಂಗವಾಗಿ ಕುಮಾರಿ ವೀಣಾ ಕೆ. ಮೂರ್ತಿಯವರ `ಕರ್ನಾಟಕ ಸಂಗೀತ' ಕಾರ್ಯಕ್ರಮವಿದ್ದಿತ್ತು. ಕುಮಾರಿ ವೀಣಾ ಮೂರ್ತಿಯವರು ಪುರಂದರದಾಸರ, `ಗಜವದನ ಬೇಡುವೆ' ಹಂಸಧ್ವನಿ ರಾಗದಲ್ಲಿ, ತ್ಯಾಗರಾಜರ ಕೊಲುರ ಮರಗದ ತೆಲುಗಿನಲ್ಲಿ, ತೋಡಿ ರಾಗದಲ್ಲಿ, ಪುರಂದರದಾಸರ `ಕಲ್ಲು ಸಕ್ಕರೆ ಕೊಳ್ಳಿರೋ' ರಾಗ ಕಲ್ಯಾಣಿಯಲ್ಲಿ, `ಗೋವಿಂದ ನಿನ್ನ ನಾಮವೇ ಚಂದ' ಬೃಂದಾವನ ರಾಗದಲ್ಲಿ ಹಾಡಿದರು.

ಸಾಹಿತ್ಯಕ್ಕೆ ಕಾರ್ಯಕ್ರಮದ ಕೊನೆಯಲ್ಲಿ ಇಟ್ಟು ಕೊಂಡ ಈ ಸಂಗೀತ ಕಾರ್ಯಕ್ರಮ ಒಟ್ಟು ಕಾರ್ಯಕ್ರಮಕ್ಕೆ ಇನ್ನಿಲ್ಲದ ಕಳೆಯನ್ನು ತಂದು ಕೊಟ್ಟಿತ್ತು. ಕಾರ್ಯಕ್ರಮದ ಮೊದಲಲ್ಲಿ ಡಾ| ಎನ್. ತೇಜಪ್ಪನವರು ಸ್ವಾಗತಿಸಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಪ್ರೊ| ಸೀತಾರಾಮ ಶೆಟ್ಟಿಯವರು ಮಾಡಿದರು. ಕೊನೆಯಲ್ಲಿ ಶ್ರೀ ಚಂದ್ರಶೇಖರ ರಾವ್ ವಂದನಾರ್ಪಣೆ ಮಾಡಿದರು.



ಜನವರಿ 19ರಂದು ಮೈಸೂರು ಏಸೋಸಿಯೇಶನ್ ಸಭಾಗೃಹದಲ್ಲಿ ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ 1996ರ ಕೃತಿ ವಿಮರ್ಶೆ ಮತ್ತು ಕರ್ನಾಟಕ ಸಂಗೀತ ಕಚೇರಿ ಕಾರ್ಯಕ್ರಮದಲ್ಲಿ ಕುಮಾರಿ ವೀಣಾ ಕೆ. ಮೂರ್ತಿ ಮತ್ತು ಸಂಗಡಿಗರಿಂದ ಕರ್ನಾಟಕ ಸಂಗೀತ ಕಚೇರಿಯ ಸಂದರ್ಭ

## ಕನ್ನಡ ಸಂಘ - ಆರ್. ಜೆ. ಪಾಲನ್

ಈಚೆಗೆ ರಾಮ್‌ನಿರಂಜನ ಝುನ್‌ಝುನ್‌ವಾಲಾ ಕಾಲೇಜಿನಲ್ಲಿ ಅಂತರ ಕಾಲೇಜು ಪ್ರತಿಭಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಇದರ ಅಧ್ಯಕ್ಷತೆಯನ್ನು ಸದ್ಗುರು ಫೈನಾನ್ಸ್‌ನ ನಿರ್ದೇಶಕರಾದ ಶ್ರೀ ತ್ಯಾಗರಾಜ ಶೆಟ್ಟಿಯವರು ವಹಿಸಿದ್ದರು. ತೀರ್ಪುಗಾರರಾಗಿ `ಕರ್ನಾಟಕ ಮಲ್ಲ'ದ ಉಪ ಸಂಪಾದಕರಾದ ಶ್ರೀ ಶೇಖರ ಅಜೆಕಾರು, ಕಾದಂಬರಿಕಾರ್ತಿ ಶೈಲಾ ಆರ್. ಶೆಟ್ಟಿ ಮತ್ತು ಕವಯತ್ರಿ ಕುಸುಮ ಅಮೀನ್ ಭಾಗವಹಿಸಿದ್ದರು.

### ಪ್ರತಿಭಾ ಸ್ಪರ್ಧೆಗಳ ಫಲಿತಾಂಶ:

ಭಾಷಣ ಸ್ಪರ್ಧೆ: ಇದರಲ್ಲಿ ಮೊದಲ ಬಹುಮಾನ ಕನ್ನಡ ಭವನದ ಜ್ಯೂನಿಯರ್ ಕಾಲೇಜಿನ ಸುಧಾಕರ್ ಮೆಂಡನ್‌ನವರಿಗೆ ದೊರೆಯಿತು. ಎರಡನೆಯ ಬಹುಮಾನ ವಿದ್ಯಾ ಪ್ರಸಾರಕ ವಿವೇಕ ಮಂಡಲ ಕಾಲೇಜಿನ ರಾಜೇಶ್ವರಿ ಭಟ್ ಹಾಗೂ ರಾಮ್‌ನಿರಂಜನ್ ಝುನ್‌ಝುನ್‌ವಾಲಾ ಕಾಲೇಜಿನ ಆಂಟ್ನೋನಿ ಡಿ'ಸೋಜನವರಿಗೆ ದೊರೆಯಿತು. ಮೂರನೆಯ ಬಹುಮಾನ ಕೆ. ಜೆ. ಸೋಮಯ್ಯ ಜ್ಯೂನಿಯರ್ ಕಾಲೇಜಿನ ಸತೀಶ್ ಶೆಟ್ಟಿಯವರಿಗೆ ದೊರೆಯಿತು.

ಭಾವಗೀತೆ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ರಾಮ್‌ನಿರಂಜನ್ ಝುನ್‌ಝುನ್‌ವಾಲಾ ಕಾಲೇಜಿನ ಸುನೀತಾ ಶೆಟ್ಟಿಯವರಿಗೆ ಸಿಕ್ಕಿತು.

ಎರಡನೆಯ ಬಹುಮಾನ ಕೆ. ವಿ. ಎಸ್. ಜ್ಯೂನಿಯರ್ ಕಾಲೇಜಿನ ನಿತ್ಯಾನಂದ ಪೂಜಾರಿಯವರಿಗೆ ದೊರೆಯಿತು ಮತ್ತು ಮೂರನೆಯ ಬಹುಮಾನವು ವಿ. ಪಿ. ಎಂ. ಜ್ಯೂನಿಯರ್ ಕಾಲೇಜಿನ ವಿದ್ಯಾ ಅಮೀನ್‌ನವರಿಗೆ ದೊರೆಯಿತು.

ಸಮೂಹ ಗೀತೆ: ಇದರಲ್ಲಿ ಮೊದಲನೆಯದಾಗಿ ವಿ. ಪಿ. ಎಮ್. ಕನ್ನಡ ಜ್ಯೂನಿಯರ್ ಕಾಲೇಜಿಗೆ ದೊರೆಯಿತು.

ಎರಡನೆಯ ಬಹುಮಾನ ಕೆ. ಜೆ. ಸೋಮಯ್ಯ ಜ್ಯೂನಿಯರ್ ಕಾಲೇಜಿಗೆ ದೊರೆಯಿತು. ನಂತರ ಮೂರನೆಯ ಬಹುಮಾನ ಕೆ. ಜೆ. ಸೋಮಯ್ಯಾದ ಡಿಗ್ರಿ ಕಾಲೇಜಿಗೆ ದೊರೆಯಿತು.

ಏಕಪಾತ್ರಾಭಿನಯ: ಇದರಲ್ಲಿ ಮೊದಲನೆಯ ಬಹುಮಾನ ವಿ. ಪಿ. ಎಂ. ಜ್ಯೂನಿಯರ್ ಕಾಲೇಜಿನ ಪ್ರಶಾಂತ್ ಶೆಟ್ಟಿಯವರಿಗೆ ದೊರೆಯಿತು.

ಎರಡನೆಯ ಬಹುಮಾನವು ಕೆ. ಜೆ. ಸೋಮಯ್ಯ ಕಾಲೇಜಿನ ಸತೀಶ್ ಶೆಟ್ಟಿಯವರಿಗೆ ದೊರೆಯಿತು. ನಂತರ ಮೂರನೆಯ ಬಹುಮಾನವು ಕೆ. ಜಿ. ಸೋಮಯ್ಯದ ಡಿಗ್ರಿ ಕಾಲೇಜಿನ ಪ್ರವೀಣ್ ಹೆಗ್ಡೆಯವರಿಗೆ ದೊರೆಯಿತು.

ಸ್ಪರ್ಧೆಯಲ್ಲಿ ವಿಜೇತರಾದ ಎಲ್ಲರಿಗೂ ಕನ್ನಡ ಸಂಘದ ಅಭಿನಂದನೆಗಳು.

ವರದಿ: ಶೈಲಜ ಎಸ್. ಶೆಟ್ಟಿ.

## ಕನ್ನಡ ಸಂಘ

``ಕನ್ನಡ ಅಧ್ಯಯನದ ಮೂಲಕ ಕನ್ನಡ ಸಂಸ್ಕೃತಿಯ ಉಳಿವು ಮುಂಬೈ ಕನ್ನಡ ವಿದ್ಯಾರ್ಥಿಗಳ ಹೊಣೆಗಾರಿಕೆಯಾಗಿದೆ. ರಾಷ್ಟ್ರಭಾಷೆ ಒಂದಲ್ಲ, ಹಲವು ರಾಷ್ಟ್ರ ಭಾಷೆಗಳಿವೆ. ಕನ್ನಡ, ಮರಾಠಿ, ತಮಿಳು, ಗುಜರಾತಿ - ಎಲ್ಲಾ ಭಾಷೆಗಳೂ ರಾಷ್ಟ್ರ ಭಾಷೆಗಳೇ, ಹಿಂದಿ ಮಾತ್ರ ರಾಷ್ಟ್ರ ಭಾಷೆ ಎನ್ನುವುದು ಸರಿಯಲ್ಲ" ಎಂದು ರಾಮ್‌ನಿರಂಜನ್ ಝುನ್‌ಝುನ್‌ವಾಲಾ ಕಾಲೇಜಿನ ಕನ್ನಡ ಸಂಘದ ಚಟುವಟಿಕೆಗಳನ್ನು ಉದ್ಘಾಟಿಸುತ್ತಾ ಮುಖ್ಯ ಅತಿಥಿಯಾಗಿ ಬಂದಿದ್ದ ಡಾ|

ತಾಳ್ತಜೆ ವಸಂತಕುಮಾರ್ ಹೇಳಿದರು.

ವಿಶೇಷ ಅತಿಥಿಯಾಗಿ ಆಗಮಿಸಿದ್ದ ಡಾ| ಮಣಿಮಾಲಿನಿ, ವಿ. ಕೆ. ಅವರನ್ನು, ಅವರ ``ಭಾರತೀಯ ಸಾಹಿತ್ಯದಲ್ಲಿ ದ್ರೌಪದಿ'' ಎಂಬ ವಿಷಯದ ಬಗ್ಗೆ ಸಂಶೋಧನೆ ಮಾಡಿ ವಿಶ್ವವಿದ್ಯಾಲಯದಿಂದ ಪಿ.ಎಚ್.ಡಿ. ಪದವಿ ಪಡೆದಿದ್ದಕ್ಕಾಗಿ ಅಭಿನಂದಿಸಲಾಯಿತು. ಕನ್ನಡ ಸಂಘದ ವತಿಯಿಂದ ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿರುವ ಪ್ರೊ| ಜಿ. ಎನ್. ಉಪಾಧ್ಯ ಅವರು ಅಭಿನಂದನ ಭಾಷಣ ಮಾಡಿದರು.

ವಿದ್ಯಾರ್ಥಿನಿಯರ ಪ್ರಾರ್ಥನೆಯಿಂದ ಆರಂಭವಾದ ಕಾರ್ಯಕ್ರಮವು, ಪ್ರಾಂಶುಪಾಲ ಬಿ. ಎನ್. ವೈ. ರಾಮ್ ಅವರ ಅತಿಥಿಗಳ ಸ್ವಾಗತ ಮತ್ತು ಮಾಜಿ ಪ್ರಾಂಶುಪಾಲ ಪ್ರೊ| ಜಿ. ಟಿ. ಜೋಶಿಯವರು ಮುಖ್ಯ ಅತಿಥಿಗಳನ್ನು ಪರಿಚಯಿಸಿದರೆ, ಕಾರ್ಯದರ್ಶಿ ಆಂಟನಿ ಡಿ'ಸೋಜಾ ವಂದನಾರ್ಪಣೆಗೈದರು. ಕಾರ್ಯಕ್ರಮದ ನಿರ್ವಹಣೆಯನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ| ಕೆ. ರಘುನಾಥ ಮಾಡಿದರು.

## ಕನ್ನಡ ಸಂಘ, ಕೆ. ಜೆ. ಸೋಮಯ್ಯ ಕಾಲೇಜು

ಪ್ರತಿಭಾ ವಿಕಾಸದಲ್ಲಿ ತಲ್ಲೀನರಾಗಬೇಕು. ಕಷ್ಟಪಟ್ಟವರು ಜೀವನದಲ್ಲಿ ಸಫಲರಾಗುತ್ತಾರೆ. ಕಿರಿಯ ಮಕ್ಕಳೇ ಮುಂದೆ ನಾಡನ್ನು ಬೆಳಗಿಸುವವರು; ನಾಡಿನ ಭವಿಷ್ಯ ಕಿರಿಯರ ಕೈಯಲ್ಲಿದೆ. ಕೇವಲ ಮನೋರಂಜನೆ ಕೂಟಾಟಗಳಲ್ಲಿ ಸಮಯ ಹಾಳು ಮಾಡಬಾರದು. ಸ್ಪರ್ಧಾತ್ಮಕ ಜೀವನದಲ್ಲಿ ಮುನ್ನಡೆಯತೊಡಗಿರಿ ಎಂದು ಖ್ಯಾತ ಸಮಾಜ ಸೇವಕ, ಶ್ರೀ ಆದಿಶಕ್ತಿ ಶಾಲೆಯ ಸಂಘದ ಚೆಯರ್‌ಮ್ಯಾನ್ ಆದ ಶ್ರೀ ಜಯರಾಮ ಶೆಟ್ಟಿ ಹೇಳಿದರು. ಅವರು ಸೋಮಯ್ಯ ಕಾಲೇಜಿನ ಕನ್ನಡ ಸಂಘದ ಅಂತರ ಕಾಲೇಜು ಪ್ರತಿಭಾ ಸ್ಪರ್ಧೆಗಳ ಕಾರ್ಯಕ್ರಮದ ಮುಖ್ಯ ಅತಿಥಿ ಸ್ಥಾನದಿಂದ ಮಾತಾಡುತ್ತಿದ್ದರು.

ಜಾತಿ ಮತಗಳು ಮಾನವರನ್ನು ಗುಂಪು ಗುಂಪಾಗಿಸಿ, ಮಾನವರೆಲ್ಲ ಒಂದಾಗಿ ಬಾಳಬೇಕು. ಕಲಿಯುಗದಲ್ಲಿ ಅನೇಕ ಮಹಾನ್ ಪುರುಷರು ಜಗದ ಜನರ ಉದ್ಧಾರ ಮಾಡಿದ್ದಾರೆ. ಅವರೆಲ್ಲರು ನಮಗೆ ಆದರ್ಶರಾಗಿದ್ದಾರೆ. ನಮ್ಮ ಸಂಸ್ಕೃತಿಯನ್ನು ಭಾಷೆಯನ್ನು ಕಲಿಸಿಕೊಡಬೇಕು. ಮಾನವರನ್ನು ಒಳ್ಳೆಯದನ್ನಾಗಿಸುವ ಧರ್ಮವು ಒಳ್ಳೆಯದು. ಜಗತ್ತಿನ ಒಳ್ಳೆಯದೆಲ್ಲವನ್ನು ಸ್ವೀಕರಿಸಿ ಬಾಳುವಂತೆ ಬಿಲ್ಲವರ ಅಸೋಸಿಯೇಶನ್‌ನ ಥಾಣೆ ಉಪಸಮಿತಿಯ ಕಾರ್ಯಾಧ್ಯಕ್ಷರು ಖ್ಯಾತ ಸಮಾಜ ಸೇವಕರೂ ಆದ ಶ್ರೀ ಸುಂದರ ಪಾಲನ್‌ಅವರು ಕರೆ ನೀಡಿದರು.

ಪರಿಶ್ರಮದಿಂದ ವ್ಯಕ್ತಿ ಸ್ವಾವಲಂಬಿಯಾಗುತ್ತಾನೆ. ಅಂತವರಿಂದಲೇ ಸಮಾಜದ ಅಭಿವೃದ್ಧಿಯಾಗುತ್ತದೆ. ಅಂತವರನ್ನು ಕಿರಿಯರು ಅನುಕರಣೆ ಮಾಡಬೇಕು. ಕನ್ನಡದ ಕೆಲಸ ಸಾಹಸದ ಕೆಲಸ. ತ್ಯಾಗ ಪ್ರವೃತ್ತಿಯ ಶಿಕ್ಷಕರಿಂದಲೇ ಉತ್ತಮ ಕೆಲಸ ಸಾಧ್ಯವೆಂದು ಪ್ರಾಂಶುಪಾಲ ಡಾ. ಎಸ್.ಕೆ. ಭವಾನಿ ಅವರು ಅಧ್ಯಕ್ಷ ಸ್ಥಾನದಿಂದ ಹೇಳಿದರು.

ಇಂದು ಪ್ರತಿಭಾ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತದೆ. ಕನ್ನಡ ಕಲಿಸುವ ಕಾಲೇಜುಗಳಲ್ಲಿಯ ಕನ್ನಡಿಗ ವಿದ್ಯಾರ್ಥಿಗಳು ಪ್ರತಿಭಾ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ತನ್ಮೂಲಕ ಕನ್ನಡಿಗರಾಗಿದ್ದು ಕನ್ನಡದ ಕೆಲಸಗಾರರಾಗಿ ಬೆಳೆಯಲು ಸಾಧ್ಯವಾಗುತ್ತದೆ. ಯುವಕರು ಭಾಷಾಭಿಮಾನದಿಂದ ಕೂಡಿ ತಮ್ಮ ಸಂಸ್ಕೃತಿಯ ಮೇಲ್ಮೆಗಾಗಿ ಪ್ರಯತ್ನಶೀಲರಾಗಬೇಕೆಂದು ಕನ್ನಡ ಸಂಘದ ಕಾರ್ಯಾಧ್ಯಕ್ಷರಾಗಿರುವ ಡಾ. ಸಂಜೀವ ಶೆಟ್ಟಿ ಅವರು ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಸಾರಿದರು.

ಪ್ರತಿಭಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಮುಂಬಯಿ ಕನ್ನಡ ಸಂಘದ ಕಾರ್ಯದರ್ಶಿ ಕವಿ ಚಂದ್ರಶೇಖರ್ ಕವಯಿತ್ರಿ ಶ್ರೀಮತಿ ಅರುಣಾ ಶೆಟ್ಟಿ, ಮತ್ತು ಕುಂಚದ ಕಲಾವಿದ ಶ್ರೀ ಶರಣು ಅವರುಗಳು ಸಹಕರಿಸಿದ್ದರು. ಶ್ರೀ ರಾವ್ ಅವರು ವಿದ್ಯಾರ್ಥಿಗಳು ಪ್ರತಿಭಾ ವಿಕಾಸದಲ್ಲಿ ತೊಡಗಿಸಿಕೊಳ್ಳಬೇಕೆಂದು ಸೂಚನೆಗಳನ್ನು ನೀಡಿದರು. ಪ್ರಾರಂಭದಲ್ಲಿ ಪ್ರಾಂಶುಪಾಲ ಡಾ. ಭವಾನಿ ಅವರು ಸ್ವಾಗತಿಸಿದರು. ಸಂಘದ ಸಂಚಾಲಕಿ ರಬಿಯಾ ಬ್ಯಾರಿ ಕಾರ್ಯಕ್ರಮವನ್ನು ನಿರ್ದೇಶಿಸಿದರು. ಕಾರ್ಯದರ್ಶಿ ಮನೋಜ್ ಕೋಟ್ಯಾನ್ ವಂದಿಸಿದರು.

ಈ ಸಂದರ್ಭದಲ್ಲಿ ಕಿಂಗ್ಸ್ ಸರ್ಕಲ್ ಮುನಿಸಿಪಲ್ ಕನ್ನಡ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಡಾ. ಜೀವಿ ಕುಲಕರ್ಣಿ ಅವರು ಬರೆದಿರುವ `ಸಂಭವಾಮಿ ಯುಗೇ ಯುಗೇ' ಎಂಬ ಕಿರುನಾಟಕವನ್ನು ಸಾದರ ಪಡಿಸಿದರು. ಹಿರಿಯ ಶಿಕ್ಷಕ ಸುಂದರ್ ಕುಂಚತ್ತೂರು ನಿರ್ದೇಶಿಸಿದ್ದು ಖ್ಯಾತ ನಾಟಕಕಾರ ಶ್ರೀ ಬಾಲಕೃಷ್ಣ ನಿಡ್ವಣ್ಣಾಯ ಅವರು ಮಾರ್ಗದರ್ಶನ ನೀಡಿದ್ದರು. ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಜಮುನಾ ಉಚ್ಚಿಲ್ ಅವರ ನೇತೃತ್ವದಲ್ಲಿ ಇತರ ಶಿಕ್ಷಕಿಯರ ಸಹಾಯ ಸಹಕಾರದಿಂದ ನಾಟಕ ಪ್ರದರ್ಶನವು ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು.

## MATRIMONIALS

Matrimonial alliance invited for Kannada speaking Brahmin boy 27 years, 5` 8", Areasa Gotra, B.Co. graduate studying for CA firm (Final `A' Gp. cleared) presently employed with reputed CA firm as Sr. Auditor with an Annual income of Rs. 80,000. Kannada Speaking Bombay settled girl preformed.

Contact Tele.: 712-322887 or write to Box No. 125

***

Looking for Bride-Groom around 28 years Smartha Brahmin (Adoni Border of Karnataka). Mother Tongue-Kannada. B.Com. passed age 231/2 years. Kaundinyasa Gotra. You may write to Box No. 126.

***

Alliance for Kannadiga Madhwa Boy-Kaundinyasa Gotra Vishaka 3rd pada. B.E. (Electronics) Manager in Tata multinational. 30 years, 6ft, fair. Girl graduate 24/26 years, 5'3". From respectable family Madhwa/Smartha Kannada speaking. You may write to Box No. 127.

***

Alliance invited for a Smartha Brahmin Girl, 25 years, 5-4" Kruttika II Lohitasa Gotra. Science graduate, PG in Industrial Chemistry. Working in a pharmaceutical firm. A Boy professionally qualified, vegetarian, teetotaller, well settled smart, 30 years or below from a good family background. Contact Tele.: 524 17 32 or you may write to box No. 128.

***

Alliance invited for 26 years 5` 2" Kannada Girl M.A. qualified Smartha Brahiman, Aridra Nakshtra, Bhardwaja Gotra, from well settled boys. Conact Dr. R. Madhav Rao Tele.: 522 89 66 or you may write to Box No. 129.

***

Matrimonial alliance invited for a Kannada speaking Hoysala Brahmin girl, age 22 years, 5'-2" Kayshyap Gotra. Commerce graduate with Diploma in Early Childhood care & Education from Bombay University. Working in J.K. School, Thane (Raymons). Boy should not be NRI, Doctor, Singlechild. Should be religious minded with hygienic habits. Working in Bombay preferably in Thane area. May write to Box No. 121.

Regn. No. 040015/86
Regn. No. MH/By/NE121/95

# YASHASWI LEASING & FINANCE LIMITED

Regd. & H.O.: SF-10, City Point, 13, Infantry Road, Bangalore - 560 001.
Phone: 2867081, 2860511, 2862222, Fax: 080-2860560

## YASHASWI

## THE DEFINITION OF SUCCESS

### WHAT ELSE ONE WANTS?

### ABSOLUTE FAITH, RAPID GROWTH & PUBLIC CONFIDENCE

- Pre-eminent organisation from Dakshina Kannada people who are famous in Banking Industries.
- After 8 years of satisfying customer service, and 13 branches, now its over to Bombay .... Nai Nai chalo Mumbai.
- Professionally managed with vast experience & a firm financial base, the company has grown from strength to strength
- The Company incorporated in 1989, is engaged in the Business of Hire Purchase, Leasing, Deposits and other Advisory Services, Industrial & Machinery Finance.
- A Company which is paying dividend since incorporation. 30% Dividend declared for the years 1994-95 & 1995-96

## MUMBAI BRANCH

OBEROI TRADE CENTRE, NEW LINK CROSS ROAD,
ANDHERI (WEST), MUMBAI - 400 053. PH: 6292011

**JOIN US FOR PROGRESS WITH SECURITY**

**SRI. U.A. BALLAL**
Chairman

**SRI. NIRANJAN NAKSHATRI**
Managing Director

**DIRECTORS:**

Sri. S.T.R. Mady
Sri. N.R. Narayana Rao
Sri. M. Raghunath Shet
Sri. Pratap Chittiappa
Sri. K.L. Ramanatha Bhat
Sri. H.N. Sreedhar
Sri. Govindaraya. S. Kamath

**Your Blessing is our success**

**BRANCH OFFICES:**

| | | |
|---|---|---|
| GOA | B-104 & 105, Radha Enclave, 1st 'B' Road, Margoa, Goa. | |
| KASARAGOD | M/s Stylo Shopping Complex, II Floor, Bank Road, Kasaragod | Phone : 530381 |
| MANGALORE | 2nd Floor, Krishna Prasad Complex, K.S. Rao Road, Mangalore - 575001 | Phone : 441932 |
| MYSORE | No. 77/1, Narayana Shastri Road, Chamaraja Mohalla, Mysore - 570 001 | Phone : 522025 |
| SHIMOGA | 1st Floor, 1st Parallel Road, [illegible]udi, Shimoga - 577 201 | Phone : 78584 |
| HUBLI | No 6, 1st Floor, Ureka Blue [illegible], N[illegible]eegine Road, Hubli - 580 029 | Phone : 351966 |
| UDUPI | 2nd Floor, New Vyavahar Comple[illegible] Maruthi Veethika, Udupi - 576 101 | Phone : 26950 |
| PUTTUR | 1st Floor, K.P. Complex, Puttur Main Road, Puttur - 574 201 (D.K.) | Phone : 22565 |
| KARKALA | 1st Floor, Janardhana Complex, Market Road, Karkala - 574 104 | Phone : 22122 |
| KUNDAPUR | No. 116-5, 1st Floor, Srilatha Mahal, Kundapur - 576 201 | Phone : 22207 |
| DAVANGERE | No. 2070, 3rd Main, Church Road, M.C.C. 'A' Block, Davangere - 577 004 | Phone : 5520. |

Edited, Printed & Published by M.A.N. Prasad behalf of the Mysore Association, Mumbai. Tel.: 402 46 17
Laser Typset and Printed at Aarati Ar Printers, Fort, Mumbai-400 001. * 266 33 61/266 59 38